**ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ ಸರ್ಕಾರ**
**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳು**
**ನೃಪತುಂಗ ರಸ್ತೆ, ಬೆಂಗಳೂರು – 01.**

**ಸಂಖ್ಯೆ :** ಸ.ಶಿ.ಅ/ಸ.ಶಿ/ಸುತ್ತೋಲೆ/01/2010 – 11. **ದಿನಾಂಕ :** 01.06.2010

# ಸುತ್ತೋಲೆ

**ವಿಷಯ :** ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ಸಮನ್ವಯ ಶಿಕ್ಷಣ ಕಾರ್ಯಚಟುವಟಿಕೆಗಳ ಅನುಷ್ಠಾನಕ್ಕಾಗಿ ಮಾರ್ಗಸೂಚಿ.

**ಉಲ್ಲೇಖ :** ದಿನಾಂಕ 26.04.2010 ರಂದು ನವದೆಹಲಿಯಲ್ಲಿ AWP ಮತ್ತು B ನಡೆದ ಸಭೆಯ ಶಿಫಾರಸ್ಸುಗಳು.

*****

ಸರ್ವ ಶಿಕ್ಷಣ ಅಭಿಯಾನ ಯೋಜನೆಯಲ್ಲಿ ಸಮನ್ವಯ ಶಿಕ್ಷಣವು ಒಂದು ಮಹತ್ವಾಕಾಂಕ್ಷೆಯಾದ ಮಧ್ಯವರ್ತನೆ. ದೈಹಿಕ ಮತ್ತು ಮಾನಸಿಕವಾಗಿ ಭಾಗಶಃ ಹಾಗೂ ಗಂಭೀರ ಸಮಸ್ಯೆಯಿರುವ ಚೇತನಗಳನ್ನು ಮುಖ್ಯ ಶೈಕ್ಷಣಿಕ ವಾಹಿನಿಯಲ್ಲಿ ಸಮನ್ವಯಗೊಳಿಸಿ ಭವಿಷ್ಯದ ಸಮರ್ಥ ಪ್ರಜೆಗಳಾಗಿ ನಿರ್ಮಾಣ ಮಾಡುವ ಗುರುತರ ಜವಾಬ್ದಾರಿ ನಮ್ಮ ಮೇಲಿದೆ. ಶ್ರದ್ಧೆ ಮತ್ತು ಪ್ರಾಮಾಣಿಕತೆಯಿಂದ ದುಡಿದು ಸೇವೆಯಲ್ಲಿ ಸಾರ್ಥಕ್ಯವನ್ನು ಅನುಭವಿಸುವ ಮನಸ್ಸುಗಳಿಗೆ ಇದೊಂದು ಸುವರ್ಣ ಅವಕಾಶವೂ ಹೌದು. ಇಂತಹ ಪವಿತ್ರ ಸೇವೆಯಲ್ಲಿ ಎಲ್ಲರೂ ಪೂರ್ಣ ಮನಸ್ಕರಾಗಿ ತೊಡಗಿಸಿಕೊಳ್ಳಲಿ ಎಂಬುದೇ ಈ ಯೋಜನೆಯ ಆಶಯ ಮತ್ತು ಸೂಚನೆ.

2010–11 ನೇ ಸಾಲಿಗೆ ಜಿಲ್ಲೆಗಳಿಂದ ಸಿದ್ಧಪಡಿಸಿ ಸಲ್ಲಿಸಿದ್ದ ಕಾರ್ಯಯೋಜನೆ ಆಯವ್ಯಯದ ಆಧಾರದ ಮೇಲೆ PAB (Project Approval Board) ಯಿಂದ ಅನುಮೋದನೆಯಾಗಿರುತ್ತದೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಪಾಲಿನ ಅನುದಾನ ಬಿಡುಗಡೆಗನುಗುಣವಾಗಿ ಸಮನ್ವಯ ಶಿಕ್ಷಣದ ಅನುಮೋದಿತ ಕಾರ್ಯಚಟುವಟಿಕೆಗಳನ್ನು ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲು ಮಾರ್ಗಸೂಚಿಯನ್ನು ಈ ಕೆಳಕಂಡಂತೆ ನೀಡಲಾಗಿದೆ.

ಜಿಲ್ಲೆಯಿಂದ ಬ್ಲಾಕ್‌ಗಳಿಗೆ ಚಟುವಟಿಕೆವಾರು ಹಣ ಬಿಡುಗಡೆ ಮಾಡಿದ ಮತ್ತು ಅದಕ್ಕನುಗುಣವಾಗಿ ಬ್ಲಾಕ್‌ಗಳಲ್ಲಿ ನಿಗದಿತ ಕಾರ್ಯಚಟುವಟಿಕೆಗಳಿಗೆ ವೆಚ್ಚ ಮಾಡಿದ ವಿವರಗಳನ್ನು ನಿಗದಿತ ನಮೂನೆಯಲ್ಲಿ ತಪ್ಪದೇ ರಾಜ್ಯ ಯೋಜನಾ ಕಛೇರಿಯ ಸಮನ್ವಯ ಶಿಕ್ಷಣ ಶಾಖೆಗೆ ಪ್ರತಿ ತಿಂಗಳು ನೀಡುವುದು.

ವಿಶೇಷ ಅಗತ್ಯತೆಯುಳ್ಳ ಮಕ್ಕಳ ಮಧ್ಯವರ್ತನೆಗೆ ಸಂಬಂಧಿಸಿದಂತೆ ಸೂಚಿಸಲಾಗಿರುವ ಚಟುವಟಿಕೆಗಳ ಅನುಷ್ಠಾನಕ್ಕೆ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿರಿಸುವುದು.

**ವಿಶೇಷ ಅಗತ್ಯವುಳ್ಳ ಮಕ್ಕಳ ವೈದ್ಯಕೀಯ ತಪಾಸಣೆ: (Formal & Functional Assessment)**

ಪ್ರತೀ ವರ್ಷ ಶಾಲೆಗಳ ಎಲ್ಲಾ ಮಕ್ಕಳಿಗೆ ಆರೋಗ್ಯ ಚೈತನ್ಯ ಕಾರ್ಯಕ್ರಮದಲ್ಲಿ ನಡೆಸಲಾಗುವ ವೈದ್ಯಕೀಯ ತಪಾಸಣೆಯಲ್ಲಿ ಎಲ್ಲಾ ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೂ ಸಹ ಸಾಮಾನ್ಯ ಆರೋಗ್ಯ ತಪಾಸಣೆ (ಕಣ್ಣು, ಕಿವಿ, ಹಲ್ಲು, ಚರ್ಮ ಹಾಗೂ ಇತರೆ ಕಾಯಿಲೆಗಳಿರುವ ಬಗ್ಗೆ) ಹಾಗೂ ಈ ಕಾಯಿಲೆಗಳಿಂದ ಮುಂದೆ ಆಗಬಹುದಾದ ಹಾನಿ ಹಾಗೂ ಅದರ ತೀವ್ರತೆಯ ಬಗ್ಗೆ ತಪಾಸಣೆ ಮಾಡಿ, ಹೆಲ್ತ್ ಕಾರ್ಡ್‌ನಲ್ಲಿ ದಾಖಲಿಸಲಾಗುವುದು. ಈ ಕಾರ್ಯಕ್ರಮದಡಿಯಲ್ಲಿ ಸರ್ಕಾರಿ ಶಾಲಾ ಮಕ್ಕಳಿಗೆ ಆರೋಗ್ಯ ಸಮಸ್ಯೆಗಳಿದ್ದರೆ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ಲಭ್ಯವಿರುವ ಚಿಕಿತ್ಸೆಯನ್ನು ಒದಗಿಸಲಾಗುವುದು. ಒಂದು ವೇಳೆ ಮಕ್ಕಳಿಗೆ ಶಸ್ತ್ರಚಿಕಿತ್ಸೆ ಅವಶ್ಯವಿದ್ದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ತಾಲ್ಲೂಕ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆಯ ಸೌಲಭ್ಯಗಳನ್ನು ಉಚಿತವಾಗಿ ದೊರಕಿಸಲಾಗುವುದು. ಸದರಿ ಆಸ್ಪತ್ರೆಯಲ್ಲಿ ಲಭ್ಯವಿಲ್ಲದ ಶಸ್ತ್ರಚಿಕಿತ್ಸೆಗಳನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಆಸ್ಪತ್ರೆಗಳಲ್ಲಿ ಉಚಿತವಾಗಿ ಮಾಡಲಾಗುವುದು. ಒಂದು ವೇಳೆ ಸದರಿ ಜಿಲ್ಲಾ ಆಸ್ಪತ್ರೆಯಲ್ಲಿಯೂ ಶಸ್ತ್ರಚಿಕಿತ್ಸೆ ಸೌಲಭ್ಯ ಲಭ್ಯವಿಲ್ಲದಿದ್ದಲ್ಲಿ

ಸಹಕಾರ ಇಲಾಖೆಯಿಂದ ಗುರುತಿಸಲ್ಪಟ್ಟ **ಯಶಸ್ವಿನಿ ನೆಟ್‌ವರ್ಕ್** ಆಸ್ಪತ್ರೆಗಳಲ್ಲಿ ಯಶಸ್ವಿನಿ ಟ್ರಸ್ಟ್ ಗುರ್ತಿಸಿದ ಶಸ್ತ್ರಚಿಕಿತ್ಸೆಗಳನ್ನು ಮತ್ತು ಇತರೆ ಚಿಕಿತ್ಸೆಗಳನ್ನು ಕೆಲವೊಂದು ಷರತ್ತಿಗೆ ಒಳಪಟ್ಟು ಉಚಿತವಾಗಿ ಮಾಡಲು ಏರ್ಪಾಡು ಮಾಡಲಾಗಿದೆ. ಈ ಚಿಕಿತ್ಸೆಗಳು ವಿದ್ಯಾರ್ಥಿಗಳಿಗೆ ಸಂಪೂರ್ಣವಾಗಿ ಉಚಿತವಾಗಿರುತ್ತವೆ. ಇದರ ಜೊತೆಗೆ ಸಮನ್ವಯ ಶಿಕ್ಷಣ ಅಡಿಯಲ್ಲಿ ಬ್ಲಾಕ್ ಹಂತದಲ್ಲಿ ವೈದ್ಯಕೀಯ ಶಿಬಿರವನ್ನು ಆಯೋಜಿಸುವ ಅವಕಾಶವಿದೆ. ಈ ಸಂಬಂಧ ಬಿ.ಇ.ಓ, ಬಿ.ಆರ್.ಸಿ, ಐ.ಇ.ಆರ್.ಟಿ ಮತ್ತು ಜಿಲ್ಲಾ ಸಮನ್ವಯ ಶಿಕ್ಷಣ ಸಂಯೋಜಕರೊಂದಿಗೆ ಪೂರ್ವಭಾವಿ ಸಭೆ ನಡೆಸಿ ಕೂಲಂಕುಶವಾಗಿ ಚರ್ಚಿಸಿ, ಶಿಬಿರ ಆಯೋಜಿಸಬೇಕಾದ ಸ್ಥಳ ಮತ್ತು ವೈದ್ಯರ ವ್ಯವಸ್ಥೆಯ ಬಗ್ಗೆ ನಿರ್ಣಯಿಸುವುದು ಮತ್ತು ಈ ಸಂಬಂಧ ಜಿಲ್ಲಾ/ಬ್ಲಾಕ್‌ನ ವೈದ್ಯಾಧಿಕಾರಿಗಳೊಂದಿಗೆ ಚರ್ಚಿಸಿ ತೀರ್ಮಾನಿಸುವುದು. ಮುಂದುವರಿದು ಈ ಕೆಳಕಂಡ ಸೂಚನೆಗಳನ್ನು ಪಾಲಿಸುವುದು.

1. **ಸ್ಥಳ ಆಯ್ಕೆ.**

- ವಿಶೇಷ ಅಗತ್ಯವುಳ್ಳ ಎಲ್ಲಾ ಮಕ್ಕಳು ಸುಲಭವಾಗಿ ಭಾಗವಹಿಸಲು ಅನುಕೂಲವಿರುವ ಬ್ಲಾಕ್‌ನ ಕೇಂದ್ರ ಸ್ಥಳದಲ್ಲಿ ಆಯೋಜಿಸುವುದು.
- ಪ್ರತಿ ಕೊಠಡಿಯಲ್ಲಿಯೂ ವಿದ್ಯುತ್ ಸೌಲಭ್ಯವಿರಬೇಕು.
- ನೀರಿನ ಸೌಲಭ್ಯವಿರಬೇಕು
- ಸಾಕಷ್ಟು ಪಿಠೋಪಕರಣಗಳ ವ್ಯವಸ್ಥೆ ಮಾಡಿಕೊಳ್ಳಬೇಕು.

2. **ಭಾಗವಹಿಸಬೇಕಾದ ವೈದ್ಯರ ತಂಡ.**

- ದೈಹಿಕ ತಜ್ಞ ವೈದ್ಯರು (ಆರ್ಥೋ) – 02
- ಮನೋ ತಜ್ಞ ವೈದ್ಯಾಧಿಕಾರಿಗಳು – 01
- ವಾಕ್ – ಶ್ರವಣ (ಇ.ಎನ್.ಟಿ) ತಜ್ಞ ವೈದ್ಯಾಧಿಕಾರಿಗಳು – 02
- ಕಣ್ಣಿನ ತಜ್ಞ ವೈದ್ಯಾಧಿಕಾರಿಗಳು (ಆಪ್ತಮಾಲಜಿ) – 02
- ಇ.ಎನ್.ಟಿ ಆಡಿಯಾಲಜಿ ತಜ್ಞರು – 01
- ಸಾಧನ ಸಲಕರಣೆಗಳನ್ನು ಸರಬರಾಜು ಮಾಡಲು ಜವಾಬ್ದಾರಿ ಹೊಂದಿಕೊಂಡ ಸಂಸ್ಥೆಯ ತಂಡ.

**ಸೂಚನೆ : ಆಡಿಯೋ ಮೀಟರ್ ತಜ್ಞರು ಸರ್ಕಾರಿ ದವಾಖಾನೆಗಳಲ್ಲಿ ಲಭ್ಯವಿಲ್ಲದಿದ್ದ ಸಂದರ್ಭಗಳಲ್ಲಿ ಸರ್ಕಾರೇತರ ಸಂಘ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಂದ ನೆರವು ಪಡೆಯಲು ಕ್ರಮ ಮಾಡುವುದು.**

ಇದಲ್ಲದೇ ಸಮನ್ವಯ ಶಿಕ್ಷಣದಡಿಯಲ್ಲಿ ಪ್ರತಿ ಬ್ಲಾಕ್‌ನಲ್ಲಿ ವೈದ್ಯಕೀಯ ಶಿಬಿರವನ್ನು ಏರ್ಪಡಿಸಿ ವಿಶೇಷ ಸಮೀಕ್ಷೆಯಲ್ಲಿ ಗುರ್ತಿಸಿರುವ ವಿವಿಧ ದೋಷಗಳನ್ನು ಹೊಂದಿರುವಂತಹ CWSN ಮಕ್ಕಳ ವೈದ್ಯಕೀಯ ತಪಾಸಣೆಯನ್ನು ಕಡ್ಡಾಯವಾಗಿ ಮಾಡಬೇಕು. ಈ ಮಕ್ಕಳು ಹಾಜರಾಗಲು ಅನುಕೂಲವಾಗುವ ಸ್ಥಳ/ಕಟ್ಟಡದಲ್ಲಿ ಶಿಬಿರವನ್ನು ಆಯೋಜಿಸುವುದು. ತೀವ್ರತರದ ನ್ಯೂನ್ಯತೆಯುಳ್ಳ ಹಾಗೂ ಅಲ್ಪ ಪ್ರಮಾಣದ ನ್ಯೂನ್ಯತೆ ಹೊಂದಿದ್ದು, ಸಾಧನ ಸಲಕರಣೆಗಳ ಅವಶ್ಯಕತೆಯಿರುವ ಮಕ್ಕಳು, ಕಳೆದ ಸಾಲಿನಲ್ಲಿ ಸಾಧನ ಸಾಮಗ್ರಿ ಪಡೆಯದ ಮಕ್ಕಳು ( 02 ವರ್ಷಗಳಿಗೊಮ್ಮೆ ಸಾಧನ ಸಲಕರಣೆಗಳನ್ನು ಅವಶ್ಯಕತೆಯಿರುವ ಮಗುವಿಗೆ ಪುನಃ ನೀಡಲು ಅವಕಾಶ ಕಲ್ಪಿಸಲಾಗಿದೆ.) ಕಳೆದ ಸಾಲಿನ ವೈದ್ಯಕೀಯ ಶಿಬಿರದಲ್ಲಿ ಭಾಗವಹಿಸಿ ಸಾಧನ ಸಲಕರಣೆಗಳನ್ನು ಪಡೆದಿರುವ ಮಕ್ಕಳು, ಪ್ರಸ್ತುತ ಸಾಲಿನಲ್ಲಿ ಸಾಧನ ಸಲಕರಣೆಗಳ ಅಗತ್ಯತೆಯಿರುವ ಮಕ್ಕಳು ಹಾಗೂ ಕರೆಕ್ಟೀವ್ ಸರ್ಜರಿ ಅಗತ್ಯತೆಯಿರುವ ಮಕ್ಕಳು ಈ ವೈದ್ಯಕೀಯ ಶಿಬಿರಗಳಿಗೆ ಹಾಜರಾಗುವುದು. ಈ ಸಂಬಂಧ ಮಕ್ಕಳ ಪಾಲಕ ಪೋಷಕರು, ಸಮನ್ವಯ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎನ್.ಜಿ.ಓ ಗಳು, ಇನ್ನಿತರ ಆಸಕ್ತ ಸಂಸ್ಥೆಗಳು ಶಿಬಿರಕ್ಕೆ ಹಾಜರಾಗುವಂತೆ ಸಮುದಾಯದಲ್ಲಿ ಜಾಗೃತಿ ಮೂಡಿಸಲು ಬ್ಲಾಕ್ ಹಂತದಲ್ಲಿ ಪ್ರಚಾರ ಕ್ರಮಗಳನ್ನು ಕೈಗೊಳ್ಳುವುದು. ಬ್ಲಾಕ್ ಹಂತದ ಕೋ–ಆರ್ಡಿನೇಷನ್ ಸಮಿತಿ ವೈದ್ಯಕೀಯ ತಪಾಸಣಾ ಶಿಬಿರಗಳ ವ್ಯವಸ್ಥೆ ಮಾಡಬೇಕು. ಈ ವೈದ್ಯಕೀಯ ಶಿಬಿರಗಳ ವ್ಯವಸ್ಥೆಯ ಮೇಲುಸ್ತುವಾರಿಯನ್ನು ಸರ್ವ ಶಿಕ್ಷಣ ಅಭಿಯಾನ ಜಿಲ್ಲಾ ಯೋಜನಾ

ಕಛೇರಿ ವಹಿಸಬೇಕು. **ವಿಶೇಷ ಅಗತ್ಯವಿರುವ ಮಕ್ಕಳಲ್ಲಿ ಸಾಧನ ಸಲಕರಣೆಗಳ ಅಗತ್ಯತೆಯಿರುವ ಯಾವುದೇ ಮಗುವು ವೈದ್ಯಕೀಯ ತಪಾಸಣಾ ಶಿಬಿರಕ್ಕೆ ಗೈರು ಹಾಜರಾಗದಂತೆ ಕ್ರಮ ವಹಿಸುವುದು.** ಎಲ್ಲಾ ನ್ಯೂನ್ಯತೆಗಳಿಗೆ ಸಂಬಂಧಿಸಿದ ದೋಷಗಳ ಪ್ರಮಾಣವನ್ನು ಗುರತಿಸಿ ಸೂಕ್ತ ಕ್ರಮ ಕೈಗೊಳ್ಳಲು ಅನುಕೂಲವಾಗುವಂತೆ ವೈದ್ಯರ ತಂಡವನ್ನು ಈ ಶಿಬಿರಗಳಿಗೆ ಆಹ್ವಾನಿಸುವುದು. ವೈದ್ಯಕೀಯ ತಪಾಸಣಾ ಶಿಬಿರಗಳು 2010ರ ಜೂನ್/ಜುಲೈ ತಿಂಗಳ ಮಧ್ಯದಲ್ಲಿ ಪೂರ್ಣಗೊಳಿಸಿ ಗುರ್ತಿಸಲಾದ ನ್ಯೂನ್ಯತೆವಾರು ಸಾಧನ ಸಲಕರಣೆಗಳ ಸರಬರಾಜು ಸಂಸ್ಥೆಗೆ ಜುಲೈ 20 ರೊಳಗೆ ಕಾರ್ಯಾದೇಶವನ್ನು ನೀಡುವುದು.

ಮೆಡಿಕಲ್ ಕ್ಯಾಂಪ್ ಮತ್ತು ಸಾಧನ-ಸಲಕರಣೆಗಳ ವಿತರಣೆಗಾಗಿ ಕೈಗೊಳ್ಳುವ ಶಿಬಿರಗಳಿಗೆ ಪ್ರತಿ ಬ್ಲಾಕ್‌ಗೆ ಈ ಸಾಲಿನಲ್ಲಿ ರೂ.20,000/- ಮಿತಿಯಲ್ಲಿ ಹಣ ಬಳಸಬೇಕು. ತಪಾಸಣಾವಧಿಯಲ್ಲಿ ಮಕ್ಕಳಿಗೆ ಹಾಗೂ ಪೋಷಕರಿಗೆ ಲಘು ಉಪಹಾರ, ಮಕ್ಕಳು/ಪೋಷಕರಿಗೆ ನಿಖರವಾದ ಬಸ್ ದರ, ವೈದ್ಯರ ಸಂಭಾವನೆ/ಗೌರವಧನ ನೀಡಲು ಸ್ಥಳೀಯ ಅಗತ್ಯತೆಗನುಗುಣವಾಗಿ ಹಣ ವೆಚ್ಚ ಮಾಡಬಹುದಾಗಿದೆ.
**ಸೂಚನೆ: ವಿಶೇಷ ಸಂದರ್ಭಗಳಲ್ಲಿ ಜಿಲ್ಲಾ ಹಂತದಲ್ಲಿ ಈ ತಪಾಸಣಾ ಶಿಬಿರಗಳನ್ನು ಸಂಘಟಿಸಬಹುದಾಗಿದೆ**

**ಸಿ.ಡಬ್ಲ್ಯು.ಎಸ್.ಎನ್ ಮಕ್ಕಳಿಗೆ ಸಾಧನ ಸಾಮಗ್ರಿಗಳ ಪೂರೈಕೆ.**

ತಪಾಸಣಾ ಸಮಯದಲ್ಲಿ ವೈದ್ಯರು ಮಕ್ಕಳಿಗೆ ಶಿಫಾರಸ್ಸು ಮಾಡುವ ಸಾಧನ ಸಾಮಗ್ರಿಗಳಾದ ವೀಲ್ ಚೇರ್, ಟ್ರೈಸಿಕಲ್, ಕ್ರೆಚರ್ಸ್, ಕ್ಯಾಲಿಪರ್ಸ್, ಶ್ರವಣೋಪಕರಣ, ಕನ್ನಡಕ,ಕಲಿಕಾ ಸಾಮಗ್ರಿಗಳಾದ ಬ್ರೈಲ್ ಉಪಕರಣಗಳು, ಟೇಪ್ ರೆಕಾರ್ಡರ್ (ಅಂಧ ಮಕ್ಕಳಿಗೆ ಮಾತ್ರ) ಎಂ.ಆರ್.ಕಿಟ್., ಮುಂತಾದವುಗಳನ್ನು ಅಗತ್ಯತೆಗನುಗುಣವಾಗಿ ಪೂರೈಸುವುದು. ಅನುದಾನದ ಕೊರತೆ ಕಂಡುಬಂದಲ್ಲಿ ದಾನಿಗಳಿಂದ ನೆರವು ಪಡೆಯಬಹುದಾಗಿದೆ. DDRC, ALIMCO ಸಂಸ್ಥೆಗಳಿಂದ 40 : 60 ರ (ಎಸ್.ಎಸ್.ಎ-40 : ಅಲಿಂಕೋ - 60) ಅನುಪಾತದಲ್ಲಿ ಈ ಸೌಲಭ್ಯ ಕಲ್ಪಿಸಬಹುದು. ಈ ಸಂಸ್ಥೆಗಳಲ್ಲದೆ ಸ್ಕಂಧ / ಇನ್ನಿತರ ಸಂಸ್ಥೆಗಳು ಅಲಿಂಕೋ ದರಗಳಿಗೆ ಮೀರದಂತೆ ಒದಗಿಸಲು ಮುಂದೆ ಬಂದಲ್ಲಿ 50 : 50 ( ಎಸ್.ಎಸ್.ಎ- 50 : ಸ್ಕಂಧ / ಇನ್ನಿತರ ಸಂಸ್ಥೆ - 50 ) ರ ಅನುಪಾತದಲ್ಲಿ ಸಾಧನ ಸಲಕರಣೆಗಳನ್ನು ವಿತರಿಸಲು ಕ್ರಮ ವಹಿಸುವುದು. ಮಕ್ಕಳ ವಯಸ್ಸು ಮತ್ತು ಅಂಗಾಂಗಗಳ ಅಳತೆಗೆ ಅನುಗುಣವಾಗಿ ಉತ್ತಮ ಗುಣಮಟ್ಟದ **(ISI)** ಸಾಮಗ್ರಿ ದೊರಕುವಂತೆ ಕ್ರಮಕೈಗೊಳ್ಳುವುದು. ವಿವಿಧ ಸಾಧನ-ಸಲಕರಣೆಗಳ ಸಾಮಗ್ರಿವಾರು ಬೇಡಿಕೆ ಪಟ್ಟಿಯನ್ನು ಜಿಲ್ಲಾ ಮಟ್ಟದಲ್ಲಿ ಸಿದ್ಧಪಡಿಸಿ ಅರ್ಹ ಸರಬರಾಜು ಸಂಸ್ಥೆಗಳಿಗೆ ಸರಬರಾಜು ಆದೇಶವನ್ನು ಜಿಲ್ಲಾ ಯೋಜನಾಧಿಕಾರಿಗಳು ನೀಡಬೇಕು. ಈ ಸಾಮಗ್ರಿಗಳನ್ನು ಅಕ್ಟೋಬರ್ 2010 ರೊಳಗೆ ಎಲ್ಲಾ ಮಕ್ಕಳಿಗೆ ಪೂರೈಸುವಂತೆ ಸ್ವತಃ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು. **ವಿವಿಧ ಯೋಜನೆಗಳ ಮೂಲಕ ವಿಕಲ ಚೇತನರಿಗೆ ಸಾಧನ ಸಲಕರಣೆ ನೀಡುತ್ತಿದ್ದು-ಅವು ಪುನರಾವರ್ತನೆಯಾಗದಂತೆ ( Duplicate ) ಗಮನಹರಿಸಿ - ವಿತರಣೆ ಮಾಡಲು ತಿಳಿಸಿದೆ. ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ನಿರ್ವಹಿಸುವುದು. ಸಾಧನ ಸಲಕರಣೆಗಳನ್ನು ಒದಗಿಸುವ ಮಕ್ಕಳ ವಿವರವನ್ನು ಸೂಚಿತ ನಮೂನೆಯಲ್ಲಿ ಶಿಕ್ಷಣ ಇಲಾಖೆಯ ವೆಬ್‌ನಲ್ಲಿ ಹಾಕಲು ಕ್ರಮ ಮಾಡುವುದು.**

**ಸಾಧನ ಸಲಕರಣೆಗಳ ಪೂರೈಕೆಯಲ್ಲಿ ಗಮನಿಸಬೇಕಾದ ಅಂಶಗಳು.**

- ✓ ಸಾಧನ ಸಾಮಗ್ರಿ ಒದಗಿಸುವಾಗ ಮಗುವಿನ ಅವಶ್ಯಕತೆ ಹಾಗೂ ಅಳತೆಯನ್ನು ಆಧರಿಸಿ ನೀಡಬೇಕು.
- ✓ ಎರಡು ವರ್ಷಕ್ಕೆ ಒಂದು ಬಾರಿ ಸಾಧನ - ಸಲಕರಣೆಯನ್ನು ನೀಡಬೇಕು. ಕಳೆದ ಸಾಲಿನಲ್ಲಿ ನೀಡಿಲ್ಲದ ಬಗ್ಗೆ ದೃಢೀಕರಣ ಪಡೆಯಬೇಕು.
- ✓ ಸಾಧನ-ಸಲಕರಣೆಯನ್ನು ವಿತರಣೆ ಮಾಡುವಾಗ ಮಕ್ಕಳಿಗೆ, ಪೋಷಕರಿಗೆ ಮತ್ತು ಶಿಕ್ಷಕರಿಗೆ ಸದರಿ ಸಲಕರಣೆಯನ್ನು ಧರಿಸುವ ಕ್ರಮ, ಬಳಕೆ ಮತ್ತು ನಿರ್ವಹಣೆ ಬಗ್ಗೆ ಮಾರ್ಗದರ್ಶನ ನೀಡಬೇಕು.
- ✓ ಸಾಧನ ಸಲಕರಣೆಗಳನ್ನು ಪ್ರಸಕ್ತ ಸಾಲಿನ ಆಗಸ್ಟ್ ತಿಂಗಳಿನಿಂದ ಅಕ್ಟೋಬರ್ ಮಾಹೆಯೊಳಗೆ ವಿತರಿಸಲು ಕ್ರಮ ಕೈಗೊಳ್ಳಬೇಕು.
- ✓ ವೈದ್ಯಕೀಯ ತಪಾಸಣಾ ಶಿಬಿರದ ಸಂದರ್ಭದಲ್ಲಿ ಹಿಂದಿನ ಸಾಲಿನಲ್ಲಿ ವಿತರಣೆಯಾದ ಸಾಧನ ಸಲಕರಣೆಗಳ ದುರಸ್ಥಿ ಕಾರ್ಯದ ವ್ಯವಸ್ಥೆ ಮಾಡುವುದು.

✓ ಸಾಧನ ಸಲಕರಣೆಗಳ ವಿತರಣೆಯಲ್ಲಿ ವಿಳಂಬವಾಗದಂತೆ ಕ್ರಮ ವಹಿಸಬೇಕು.

**ವಿಶೇಷ ಸೂಚನೆ ; 2009-10 ನೇ ಸಾಲಿನಲ್ಲಿ ಸೂಕ್ತ ಅಳತೆಗೆ ಅನುಗುಣವಾಗಿ ಗುಣಮಟ್ಟದ ಸಾಧನ ಸಲಕರಣೆಗಳನ್ನು ಸಕಾಲಕ್ಕೆ ಪೂರೈಸಲು ನಿರ್ಲಕ್ಷತೆ ತೋರಿದ ಸಂಸ್ಥೆಗಳನ್ನು ಕೈ ಬಿಡುವ ಬಗ್ಗೆ ತಮ್ಮ ಹಂತದಲ್ಲಿ ಪರಿಶೀಲಿಸಿ ಕ್ರಮ ಮಾಡಬಹುದು.**

**ಕ್ಲಸ್ಟರ್ ಹಂತದಲ್ಲಿ ಸಮುದಾಯ ಜಾಗೃತಿ ಶಿಬಿರ ಮತ್ತು ವಿಶ್ವ ಅಂಗವಿಕಲ ದಿನಾಚಾರಣೆ**

CWSN ಮಕ್ಕಳನ್ನು ಶೈಕ್ಷಣಿಕ ಮುಖ್ಯವಾಹಿನಿಗೆ ತರಲು ಜಾಗೃತಿ ಶಿಬಿರಗಳನ್ನು ಪರಿಣಾಮಕಾರಿಯಾಗಿ ಆಯೋಜಿಸಬೇಕಾದ ಅಗತ್ಯವಿದೆ. ಕ್ಲಸ್ಟರ್ ಹಂತದಲ್ಲಿ ಈ ಶಿಬಿರಗಳನ್ನು ಆಯೋಜಿಸಲು ರೂ 3000/- ಗಳ ಅನುದಾನವನ್ನು ಈ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ. ಸದರಿ ಅನುದಾನದಲ್ಲಿ ರೂ 2000/- ಗಳು ಜಾಗೃತಿ ಶಿಬಿರವನ್ನು ಆಯೋಜಿಸಲು ಮತ್ತು ಉಳಿದ ರೂ 1000/- ಗಳನ್ನು ವಿಶ್ವ ಅಂಗವಿಕಲರ ದಿನಾಚರಣೆಯನ್ನು ಆಚರಿಸಲು ಖರ್ಚು ಭರಿಸುವುದು.

ಈ ಜಾಗೃತಿ ಶಿಬಿರದಲ್ಲಿ ಸಮನ್ವಯ ಶಿಕ್ಷಣದ ಉದ್ದೇಶ, ಗುರಿ, ವಿವಿಧ ನ್ಯೂನ್ಯತೆಗಳ ಗುರುತಿಸುವಿಕೆ, CWSN ಮಕ್ಕಳಿಗೆ ಸರ್ಕಾರಿ ಸೌಲಭ್ಯಗಳ ಮಾಹಿತಿ, ಈ ನಿಟ್ಟಿನಲ್ಲಿ ಸಮುದಾಯದ ಪಾತ್ರ ಏನೆಂಬುದರ ಬಗ್ಗೆ ಬೆಳಕು ಚೆಲ್ಲುವ ರೀತಿ ಕ್ಲಸ್ಟರ್ ಹಂತದಲ್ಲಿ ಬೀದಿನಾಟಕ, ಪೊಫೆಟ್ ಶೋ, ವೀರಗಾಸೆ ಕುಣಿತ, ಭಜನಾ ತಂಡ ಮತ್ತು ಡೊಳ್ಳು ಕುಣಿತ ಇವೇ ಮುಂತಾದ ಕಲಾ ತಂಡಗಳ ಮೂಲಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ರೂ 2000/- ಅನುದಾನವನ್ನು ಕಲಾಮೇಳದ ಪೂರಕ ಸಾಮಗ್ರಿ ಹಾಗೂ ಕಲಾ ತಂಡದ ನಿರ್ವಹಣಾ ವೆಚ್ಚಕ್ಕಾಗಿ ಭರಿಸುವುದು. ಈ ಜಾಗೃತಿ ಶಿಬಿರವನ್ನು ಆಗಸ್ಟ್ ತಿಂಗಳಿನಲ್ಲಿ ಕೈಗೊಳ್ಳುವುದು.

ಈ ಸಾಲಿನಲ್ಲಿ ಕ್ಲಸ್ಟರ್ ಹಂತದಲ್ಲಿ ವಿಶ್ವ ಅಂಗವಿಕಲರ ದಿನಾಚರಣೆಯನ್ನು ಡಿಸೆಂಬರ್ ತಿಂಗಳಿನಲ್ಲಿ ಆಚರಿಸುವುದು. ಕಾರ್ಯಕ್ರಮಕ್ಕೆ ಕ್ಲಸ್ಟರ್ ಹಂತದ ಶಾಲೆಗಳಲ್ಲಿನ ವಿಶೇಷ ಅಗತ್ಯವುಳ್ಳ ಮಕ್ಕಳು ಭಾಗವಹಿಸುವಂತೆ ಕ್ರಮ ವಹಿಸುವುದು. ಪಠ್ಯೇತರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸ್ಪರ್ಧೆಗಳನ್ನು ಏರ್ಪಡಿಸಿ ಮಕ್ಕಳನ್ನು ಪ್ರೋತ್ಸಾಹಿಸುವುದು. ಕಾರ್ಯಕ್ರಮಕ್ಕೆ ನಿಗಧಿಗೊಳಿಸಿರುವ ರೂ 1000/- ಗಳೊಂದಿಗೆ ದಾನಿಗಳ ಸಹಕಾರದಿಂದ ಮಕ್ಕಳಿಗೆ ಮತ್ತು ಪೋಷಕರಿಗೆ ಲಘು ಉಪಹಾರದ ವ್ಯವಸ್ಥೆಯನ್ನು ಮಾಡುವುದು.
ವಿಶ್ವ ವಿಕಲಚೇತನರ ದಿನಾಚರಣೆಯನ್ನು ಸೂಚಿಸಿದಂತೆ ಕ್ಲಸ್ಟರ್ ಹಂತದಲ್ಲಿ ನಡೆಸಿದ ಬಗ್ಗೆ ವರದಿಯನ್ನು ಜಿಲ್ಲಾ ಹಂತದಲ್ಲಿ ಕ್ರೋಢೀಕರಿಸಿ ದಾಖಲೀಕರಣದೊಂದಿಗೆ ಒಂದು ಪ್ರತಿಯನ್ನು ಜಿಲ್ಲಾ ರಾಜ್ಯ ಕಛೇರಿಗೆ ಸಲ್ಲಿಸುವುದು.

**ವಿಶೇಷ ಅಗತ್ಯವುಳ್ಳ ಮಕ್ಕಳ ಪೋಷಕರ ತರಬೇತಿ**

ಸಮನ್ವಯ ಶಿಕ್ಷಣದ ಕುರಿತು ವಿವರವಾಗಿ ತಿಳಿಸಲು ಬ್ಲಾಕ್ ಹಂತದಲ್ಲಿ 02 ದಿನಗಳ ಕಾಲ ಪೋಷಕರಿಗೆ ತರಬೇತಿಯನ್ನು ಹಮ್ಮಿಕೊಳ್ಳುವುದು. ದಿನವೊಂದಕ್ಕೆ ರೂ 100/- ಗಳನ್ನು ತರಬೇತಿಗೆ ಹಾಜರಾಗುವ ಪ್ರತಿ ಪೋಷಕರಿಗೆ ಲಘು ಉಪಹಾರ ಹಾಗೂ ಸಾರಿಗೆ ಭತ್ಯೆಗಾಗಿ ಖರ್ಚು ಭರಿಸುವುದು. ತರಬೇತಿ ನಿರ್ವಹಿಸಿದ ಕುರಿತು ಸೂಕ್ತ ದಾಖಲೆಯನ್ನು ನಿರ್ವಹಿಸುವುದು.

ಈ ತರಬೇತಿ ಶಿಬಿರದಲ್ಲಿ ಪೋಷಕರಿಗೆ ತಮ್ಮ ಮಕ್ಕಳನ್ನು ನ್ಯೂನ್ಯತೆಗೆ ಅನುಗುಣವಾಗಿ ನಿರ್ವಹಿಸುವ ವಿಧಾನ, ಸಾಧನ ಸಲಕರಣೆಗಳ ಬಳಕೆ, ಸರ್ಕಾರಿ ಸೌಲಭ್ಯಗಳ ಮಾಹಿತಿ, ವೈದ್ಯಕೀಯ ನೆರವು, ಸಂಪನ್ಮೂಲ ಕೊಠಡಿಗಳ ಮಾಹಿತಿ ಮತ್ತು ತೀವ್ರ ನ್ಯೂನತೆಯುಳ್ಳ ಮಕ್ಕಳಿಗೆ ಫಿಜಿಯೋಥೆರಪಿ ಕೈಗೊಳ್ಳುವ ಬಗ್ಗೆ ವೇಳಾ ಪಟ್ಟಿಯನ್ನು ತಯಾರಿಸಿ ಪೋಷಕರಿಗೆ ತರಬೇತಿ ನೀಡುವುದು. ಐ.ಇ.ಆರ್.ಟಿ ಗಳು ಹಾಗೂ ಈ ಕ್ಷೇತ್ರದಲ್ಲಿ ಪರಿಣಿತಿಯನ್ನೊಂದಿರುವ ವ್ಯಕ್ತಿಗಳು (ಫಿಸಿಯೋಥೆರಪಿಸ್ಟ್) ಈ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯ ನಿರ್ವಹಿಸುವುದು. ಒಟ್ಟಾರೆ ಮಗುವಿನ ಪಾಲನೆ ಪೋಷಣೆಯಲ್ಲಿ ಪೋಷಕರ ಜವಾಬ್ದಾರಿ ಹಾಗೂ ಆತ್ಮಸ್ಥೈರ್ಯವನ್ನು ತುಂಬುವ ರೀತಿಯಲ್ಲಿ ಈ ತರಬೇತಿಯನ್ನು ಆಯೋಜಿಸುವುದು.

**೯೦ ದಿನಗಳ ಸಮನ್ವಯ ಶಿಕ್ಷಣ ತರಬೇತಿ.**

ಪ್ರತಿ ಸರ್ಕಾರಿ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳ ಕನಿಷ್ಠ ಇಬ್ಬರು ಶಿಕ್ಷಕರಿಗೆ RCI ಮಾನ್ಯತೆ ಹೊಂದಿದ ಸಂಸ್ಥೆಗಳಿಂದ ಸಮನ್ವಯ ಶಿಕ್ಷಣದ ಕುರಿತು ೯೦ ದಿನಗಳ ಫೌಂಡೇಶನ್ ತರಬೇತಿಯಾಗಿರಬೇಕು ಎಂಬುದು ಎಂ.ಎಚ್.ಆರ್.ಡಿ, ನವದೆಹಲಿ ಇವರ ಆಶಯ ಮತ್ತು ಸೂಚನೆ. ಕಾರಣ ಹಂತ ಹಂತವಾಗಿ ಈ ಗುರಿ ಸಾಧನೆಯಾಗಬೇಕಾಗಿದೆ. ಪ್ರಸಕ್ತ ಸಾಲಿನಲ್ಲಿ ಪ್ರತಿ ಜಿಲ್ಲೆಯಲ್ಲಿಯೂ 50 ಮಂದಿ ಶಿಕ್ಷಕರನ್ನು ತರಬೇತಿಗೆ ನಿಯೋಜಿಸುವುದು. ಈ ಶಿಕ್ಷಕರು ಹಿಂದಿನ ವರ್ಷಗಳಲ್ಲಿ ಈ ತರಬೇತಿಯನ್ನು ಪಡೆದವರಾಗಿರಬಾರದು. ನಿಯೋಜಿತ ಶಿಕ್ಷಕರಿಗೆ ಈ ತರಬೇತಿಗಾಗಿ ಗರಿಷ್ಠ ರೂ 4000/–ಗಳ ವಾರ್ಷಿಕ ಶುಲ್ಕ ಭರಿಸುವುದು.

**ಸೂಚನೆ : ಮೇಲೆ ತಿಳಿಸಲಾದ ಬುನಾದಿ ತರಬೇತಿಗೆ 50 ಮಂದಿ ಶಿಕ್ಷಕರನ್ನು ನಿಯೋಜಿಸುವಾಗ 2010–11 ನೇ ಸಾಲಿನಲ್ಲಿ ಗುರುತಿಸಲಾದ 10 ವಿಧದ ವಿಕಲತೆವಾರು ವಿಷಯಗಳಿಗೆ ಸಮಾನವಾಗಿ ವಿಂಗಡಿಸಿ ಸಂಸ್ಥೆಗಳಿಗೆ ನಿಯೋಜಿಸುವುದು.**

RCI web ನ್ನು ಹಾಗೂ ಇಗ್ನೋ, ಬೆಂಗಳೂರನ್ನು ಸಂಪರ್ಕಿಸಿ ಮೇಲಿನ ತರಬೇತಿಗಳನ್ನು ನಡೆಸುತ್ತಿರುವ ಮಾಹಿತಿಯನ್ನು ಪಡೆದು ಶಿಕ್ಷಕರನ್ನು ನಿಯೋಜಿಸಲು ಸೂಕ್ತ ಕ್ರಮ ವಹಿಸುವುದು.

**ಹಿಂದಿನ ವರ್ಷಗಳಂತೆ ಪ್ರಸಕ್ತ ಸಾಲಿನಲ್ಲಿ ಈ ಚಟುವಟಿಕಯಡಿಯಲ್ಲಿ ವಿಶೇಷ ಬಿ.ಇಡಿ ಮತ್ತು ಡಿ.ಇಡಿ ಗೆ ಶಿಕ್ಷಕರನ್ನು ನಿಯೋಜಿಸಲು ಅವಕಾಶವಿರುವುದಿಲ್ಲ. ೯೦ ದಿನಗಳ ಫೌಂಡೇಶನ್ ತರಬೇತಿಗೆ ಮಾತ್ರ ನಿಯೋಜಿಸುವುದು.**

೨೦೦೯ – 10 ನೇ ಸಾಲಿನಲ್ಲಿ ವಿಶೇಷ ಬಿ.ಇಡ್ ಪ್ರವೇಶಾತಿ ಪಡೆದ ಶಿಕ್ಷಕರಿಗೆ ಮಾತ್ರ 2 ನೇ ವರ್ಷಕ್ಕೆ ತರಬೇತಿಯನ್ನು ಮುಂದುವರಿಸಲು ರೂ 4000/– ಗಳಿಗೆ ಮೀರದಂತೆ ತರಬೇತಿ ಶುಲ್ಕವನ್ನು ನೀಡಬಹುದಾಗಿದೆ.

**ಒಟ್ಟಾರೆ ಪ್ರಸಕ್ತ ಸಾಲಿನಲ್ಲಿ ಈ ಚಟುವಟಿಕೆಯಡಿಯಲ್ಲಿ ನಿಗದಿಯಾಗಿರುವ ಒಟ್ಟು ಅನುದಾನದಲ್ಲಿ ೯೦ ದಿನಗಳ ತರಬೇತಿ ಹಾಗೂ 2 ನೇ ವರ್ಷದ ವಿಶೇಷ ಬಿ.ಇಡಿ ತರಬೇತಿಯನ್ನು ಮಾತ್ರ ಮುಂದುವರಿಸಲು ಅವಕಾಶ ಕಲ್ಪಿಸಿದೆ.**

**ಸಮನ್ವಯ ಶಿಕ್ಷಣ ಸಂಪನ್ಮೂಲ ಕೇಂದ್ರದ ಬಲವರ್ಧನೆ ಹಾಗೂ ಉನ್ನತೀಕರಣ.**

ವಿಶೇಷ ಅಗತ್ಯವುಳ್ಳ ಮಕ್ಕಳ ಕಲಿಕೆಗೆ ಪೂರಕವಾಗುವ ರೀತಿಯಲ್ಲಿ ಈಗಾಗಲೇ ಪ್ರತೀ ಬ್ಲಾಕ್‌ನಲ್ಲಿ ಸಮನ್ವಯ ಶಿಕ್ಷಣ ಸಂಪನ್ಮೂಲ ಕೇಂದ್ರವನ್ನು ಸ್ಥಾಪಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಜಿಲ್ಲಾ ಕೇಂದ್ರದಲ್ಲಿರುವ ಬ್ಲಾಕ್ ಸಂಪನ್ಮೂಲ ಕೇಂದ್ರದ ಬಲವರ್ಧನೆಗಾಗಿ ಪ್ರತಿ ಜಿಲ್ಲೆಗೆ ರೂ. 1.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಈ ಅನುದಾನದಲ್ಲಿ ರೂ. 0.65 ಲಕ್ಷ ಗಳನ್ನು ಜಿಲ್ಲಾ ಕೇಂದ್ರದ ಸಮನ್ವಯ ಶಿಕ್ಷಣ ಸಂಪನ್ಮೂಲ ಕೇಂದ್ರದಲ್ಲಿ CWSN ಸ್ನೇಹಿ ಶೌಚಾಲಯವನ್ನು ನಿರ್ಮಾಣ ಮಾಡುವುದು (ಈಗಾಗಲೇ ಕೆಲವು ಶಾಲೆಗಳಲ್ಲಿ ಕಟ್ಟಿಸಿರುವ CWSN ಸ್ನೇಹಿ ಶೌಚಾಲಯ ಮಾದರಿಯಲ್ಲಿ ಹಾಗೂ ರಾಜ್ಯ ಕಛೇರಿಯಿಂದ ನೀಡಿದ ಪ್ಲಾನಿನಂತೆ). ಈ ಕೇಂದ್ರವು ಬುನಾದಿ ತರಬೇತಿ ಪಡೆಯುತ್ತಿರುವ ಶಿಕ್ಷಕರಿಗೆ Study Center ಆಗಿ ಸಹ ಕಾರ್ಯ ನಿರ್ವಹಿಸಬೇಕಾಗಿರುವುದರಿಂದ ಉಳಿಕೆ ರೂ. 35.000/– ಗಳಲ್ಲಿ ಸದರಿ ಸಂಪನ್ಮೂಲ ಕೇಂದ್ರಕ್ಕೆ ಬೇಕಾದ ಕಂಪ್ಯೂಟರ್, (ಇಂಟರ್‌ನೆಟ್ ಹಾಗೂ ಪ್ರಿಂಟರ್ ಸೌಲಭ್ಯದೊಂದಿಗೆ) ಸಮನ್ವಯ ಶಿಕ್ಷಣ ಮಾಹಿತಿ ಒಳಗೊಂಡ ಪುಸ್ತಕಗಳನ್ನು ಖರೀದಿಸುವುದು. ಇದಲ್ಲದೇ ಸ್ಪೀಚ್ ಥೆರಪಿ, ಫಿಜಿಯೋಥೆರಪಿ ವಿಧಾನ ಒಳಗೊಂಡ ಸಿ.ಡಿಗಳು ಹಾಗೂ ಕಲಿಕಾ ಸಾಮಗ್ರಿಗಳನ್ನು ಖರೀದಿಸಲು ಬಳಸುವುದು. **ಉದಾ :** ಬ್ರೈಲ್ ಕಿಟ್, ಚಿತ್ರ ಪಟಗಳು, ಮಾದರಿಗಳು ಇತ್ಯಾದಿ... ತರಬೇತಿ ಸಮಯದಲ್ಲಿ ಶಿಕ್ಷಕರಿಗೆ/ಪೋಷಕರಿಗೆ ಅನುಪಾಲನಾಧಿಕಾರಿಗಳಿಗೆ ಸಮನ್ವಯ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸುವಂತಹ ತರಬೇತಿ ಸಾಹಿತ್ಯಗಳು, ಚಿತ್ರ ಪಟಗಳು ದೃಕ್ ಶ್ರವಣೋಪಕರಣಗಳನ್ನು ವ್ಯವಸ್ಥೆಗೊಳಿಸುವುದು. ಒಟ್ಟಾರೆ ಈ ಕೇಂದ್ರಗಳು ಶಿಕ್ಷಕರಿಗೆ ತಮ್ಮ ತರಗತಿಯಲ್ಲಿ ಸಹಾಯಕವಾಗುವ ವಾತಾವರಣವನ್ನುಂಟುಮಾಡಲು ಪ್ರೇರಣೆ ನೀಡುವಂತಿರಬೇಕು.

ಈ ಕೇಂದ್ರಗಳು ಕೇವಲ ಮಾಹಿತಿಯನ್ನು ನೀಡುವುದಷ್ಟೇ ಅಲ್ಲದೇ ವಿಶೇಷ ಅಗತ್ಯವುಳ್ಳ ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಸದುಪಯೋಗವಾಗುವ ರೀತಿಯಲ್ಲಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವುದು ಮತ್ತು ಶೈಕ್ಷಣಿಕ ವರ್ಷದ ಕಾರ್ಯನಿರತ ಎಲ್ಲಾ ದಿನಗಳಲ್ಲಿ ಸದುಪಯೋಗಕ್ಕೆ ಮುಕ್ತವಾಗಿರಿಸಿ ತಜ್ಞರ / ಐ.ಇ.ಆರ್.ಟಿಗಳ ಸಹಕಾರದಿಂದ ಮಕ್ಕಳ ಅಗತ್ಯತೆಗೆ ಅನುಗುಣವಾಗಿ ತರಬೇತಿಯನ್ನು ನೀಡುವುದು. ಫಿಜಿಯೋಥೆರಪಿ, ಸ್ಪೀಚ್ ಥೆರಫಿ, ಜೀವನ ಕೌಶಲ್ಯಗಳ ಕಲಿಕೆ, ಇವುಗಳನ್ನೊಳಗೊಂಡಂತೆ ಕಲಿಕೆಯನ್ನು ದೃಢಪಡಿಸುವ ರೀತಿಯಲ್ಲಿ ತರಬೇತಿ ನೀಡುವ ಸಂಪನ್ಮೂಲ ಕೇಂದ್ರವಾಗಿ ಕಾರ್ಯನಿರ್ವಹಿಸಬೇಕಿದೆ.

**ಗೃಹಾಧಾರಿತ ಶಿಕ್ಷಣ ಸ್ವಯಂ ಸೇವಕರಿಗೆ ಗೌರವ ಸಂಭಾವನೆ**

ಪ್ರಸಕ್ತ ಸಾಲಿನಲ್ಲಿ ಗೃಹಾಧಾರಿತ ಶಿಕ್ಷಣ ನೀಡುವ ಸ್ವಯಂ ಸೇವಕರಿಗೆ ಒಂದು ಮಗುವಿಗೆ ಮಾಸಿಕ ರೂ 375/- ರಂತೆ ಗೌರವ ಸಂಭಾವನೆಯನ್ನು ಬಿಡುಗಡೆ ಮಾಡುವುದು. ಒಬ್ಬ ಸ್ವಯಂ ಸೇವಕರಿಗೆ 8 ಕಿ.ಮೀ ವ್ಯಾಪ್ತಿಗೆ ಅನ್ವಯಿಸುವಂತೆ ಕನಿಷ್ಠ ಒಂದು ಗರಿಷ್ಠ ಮೂರು ಮಕ್ಕಳ ನಿರ್ವಹಣಾ ಜವಾಬ್ದಾರಿಯನ್ನು ನೀಡುವುದು. ಸ್ವಯಂ ಸೇವಕರು ವಾರದಲ್ಲಿ 2 ದಿನ ಒಂದು ಮಗುವಿನ ಮನೆಗೆ ತೆರಳಿ ಕನಿಷ್ಠ 2 ಗಂಟೆಗಳು ಸದರಿ ಮಗುವಿಗೆ ಜೀವನ ನಿರ್ವಹಣಾ ಕೌಶಲಗಳನ್ನು ಕಲಿಸುವುದು.

ಸ್ವಯಂ ಸೇವಕರಿಗೆ ಗೌರವ ಸಂಭಾವನೆಯನ್ನು, ಸದರಿಯವರನ್ನು ನೇಮಕ ಮಾಡಿದ ಎನ್.ಜಿ.ಒ / ಏಜೆನ್ಸಿಗಳ ಮೂಲಕವೆ ವಿತರಣೆ ಆಗುವಂತೆ ನೋಡಿಕೊಳ್ಳುವುದು. ಗೃಹಾಧಾರಿತ ಕೇಂದ್ರಗಳ ಸ್ವಯಂ ಸೇವಕರ ಕಾರ್ಯವೈಖರಿಯನ್ನು ಗಮನಿಸುವುದು. ಬಿ.ಇ.ಒ/ಬಿ.ಆರ್.ಸಿ ಯವರು ಸ್ವಯಂ ಸೇವಕರಿಗೆ ಗೌರವ ಸಂಭಾವನೆಯು ಸಕಾಲದಲ್ಲಿ ತಲುಪಿದ ಬಗ್ಗೆ ಐ.ಇ.ಆರ್.ಟಿ ಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಖಾತ್ರಿ ಪಡಿಸಿಕೊಳ್ಳುವುದು. **ಗೌರವ ಸಂಭಾವನೆ ನೀಡುವಲ್ಲಿ ಕಾಲ ವಿಳಂಬ ಅಥವಾ ನಿರ್ಲಕ್ಷತೆ ತೋರಿಸಿದಲ್ಲಿ ಕಾರಣರಾದವರ ಬಗ್ಗೆ ಸೂಕ್ತ ಕ್ರಮ ಜರುಗಿಸುವುದು.**

**ಗೃಹಾಧಾರಿತ ಶಿಕ್ಷಣದ ಸ್ವಯಂ ಸೇವಕರಿಗೆ 10 ದಿನಗಳ ಸನಿವಾಸ ತರಬೇತಿ.**

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಪ್ರಾಥಮಿಕ ಶಿಕ್ಷಣದ ಮುಖ್ಯವಾಹಿನಿಗೆ ತರುವ ತಂತ್ರಗಳ ಕಾರ್ಯಕ್ರಮದಲ್ಲಿ ತೀವ್ರ ನ್ಯೂನ್ಯತೆ ಕಾರಣದಿಂದಾಗಿ ಶಾಲೆಗೆ ಬರಲು ಸಾಧ್ಯವಾಗದ ಮಕ್ಕಳಿಗೆ ಗೃಹಾಧಾರಿತ ಶಿಕ್ಷಣ ನೀಡುವುದು ಒಂದು ಪ್ರಮುಖ ಚಟುವಟಿಕೆಯಾಗಿದೆ. ಸ್ಪರ್ಷ ಎಂಬ ತರಬೇತಿ ಸಾಹಿತ್ಯ ಕೈಪಿಡಿಯನ್ನು ರಚಿಸಲಾಗಿದ್ದು ಅಗತ್ಯತೆಯಿದ್ದಲ್ಲಿ ಇದನ್ನು ಸ್ಥಳೀಯ ಅಗತ್ಯತೆಗನುಗುಣವಾಗಿ ಸಾಹಿತ್ಯ ಪರಿಷ್ಕರಿಸಿ ವಿನ್ಯಾಸ ರಚಿಸಿಕೊಳ್ಳಲು ತಿಳಿಸಲಾಗಿದೆ. ಅದರಂತೆ 10 ದಿನಗಳ ಸನಿವಾಸ ತರಬೇತಿಯನ್ನು ಡಯಟ್‌ನ ಸಹಯೋಗದೊಂದಿಗೆ ಸ್ವಯಂ ಸೇವಕರಿಗೆ ನೀಡುವುದು. ಇದಕ್ಕಾಗಿ ಒಬ್ಬರಿಗೆ ದಿವೊಂದಕ್ಕೆ ರೂ. 130/- ಘಟಕ ವೆಚ್ಚದಲ್ಲಿ 10 ದಿನಗಳ ಸನಿವಾಸ ತರಬೇತಿಯನ್ನು ನೀಡಬಹುದಾಗಿದೆ.

ತರಬೇತಿಯಲ್ಲಿ ಸ್ವಯಂ ಸೇವಕರಿಗೆ ಮಕ್ಕಳ ನಿರ್ವಹಣೆ, ಫಿಜಿಯೋಥೆರಪಿ ಮಾಡುವ ವಿಧಾನ, ಸರ್ಕಾರಿ ಸೌಲಭ್ಯಗಳ ಮಾಹಿತಿ, ದಾಖಲೆಗಳ ನಿರ್ವಹಣೆ, ಕ್ರಿಯಾ ಯೋಜನೆ ತಯಾರಿಸುವ ರೀತಿ, ವ್ಯಕ್ತಿ ಅಧ್ಯಯನ, ವೈಯಕ್ತಿಕ ಶೈಕ್ಷಣಿಕ ಅಧ್ಯಯನ (IEP) ಮತ್ತು ಪ್ರಗತಿಯನ್ನು ದಾಖಲಿಸುವ ಬಗೆ ಈ ಅಂಶಗಳನ್ನೊಳಗೊಂಡ ತರಬೇತಿ ವಿನ್ಯಾಸವನ್ನು ರಚಿಸಿ ಉತ್ತಮ ಸಂಪನ್ಮೂಲ ತಂಡದಿಂದ ತರಬೇತಿಯನ್ನು ಸ್ವಯಂ ಸೇವಕರಿಗೆ ನೀಡುವುದು. ತರಬೇತಿ ಸಮಯದಲ್ಲಿ ಶಿಬಿರಾರ್ಥಿಗಳಿಗೆ ಕ್ಷೇತ್ರ ಅಧ್ಯಯನಕ್ಕೆ ಅವಕಾಶವನ್ನು ಖಡ್ಡಾಯವಾಗಿ ಕಲ್ಪಿಸುವುದು.

**10 ದಿನಗಳ ಬಹು ನ್ಯೂನ್ಯತೆಯ ತರಬೇತಿ (Multicategory Training)**

ಪ್ರಸಕ್ತ ಸಾಲಿನಲ್ಲಿ ಪ್ರತಿ ಬ್ಲಾಕ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 03 ಮಂದಿ ಸಮನ್ವಯ ಶಿಕ್ಷಣ ಸಂಪನ್ಮೂಲ ಶಿಕ್ಷಕರು ಹಾಗೂ ಹೊಸದಾಗಿ ನೇಮಿಸಬೇಕಿರುವ 02 ಮಂದಿ ವಿಶೇಷ ಶಿಕ್ಷಕರಿಗೆ 10 ದಿನಗಳ ಬಹು ನ್ಯೂನ್ಯತೆಯ ಸನಿವಾಸ ತರಬೇತಿ (Multicategory Training ) ಯನ್ನು ನೀಡಲು ಯೋಜಿಸಲಾಗಿದೆ. ರಾಜ್ಯ ಹಂತದಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಂಡಿರುವ ಸರ್ಕಾರೇತರ ಸಂಸ್ಥೆಯ

ಮೂಲಕ ಈ ತರಬೇತಿಯನ್ನು ಕೊಡಿಸಲು ಯೋಜಿಸಲಾಗುತ್ತಿದೆ. ಕಾರಣ ಈ ಸಂಬಂಧ ಮುಂದೆ ನೀಡುವ ಸೂಚನೆಯನ್ನು ಅನುಸರಿಸಿ ಕ್ರಮ ಮಾಡುವುದು.

**ಗೃಹಾಧಾರಿತ ಶಿಕ್ಷಣಕ್ಕೊಳಪಡುವ ಮಕ್ಕಳ ಮತ್ತು ಪೋಷಕರಿಗೆ ಸಾರಿಗೆ ಸೌಲಭ್ಯವನ್ನು ಒದಗಿಸುವುದು.**

( Escort Facility)

ಗೃಹಾಧಾರಿತ ಶಿಕ್ಷಣಕ್ಕೊಳಪಡುವ ಕೆಲವು ಮಕ್ಕಳಿಗೆ ಫಿಜಿಯೋಥೆರಪಿಯ ಅವಶ್ಯಕತೆಯಿದ್ದು, ಇದನ್ನು ಬ್ಲಾಕ್‌ಗಳಲ್ಲಿನ ಸಮನ್ವಯ ಶಿಕ್ಷಣ ಸಂಪನ್ಮೂಲ ಕೇಂದ್ರಗಳಲ್ಲಿ ಕೊಡಲಾಗುತ್ತಿದೆ. ಫಿಜಿಯೋಥೆರಪಿಯನ್ನು ಹೇಗೆ ಮಾಡಬೇಕು ಎಂಬುದರ ಬಗ್ಗೆ ಆ ಮಕ್ಕಳ ಪಾಲಕರಿಗೆ/ಸಹಾಯಕರಿಗೆ ತಿಳಿದಿದ್ದರೆ ಮನೆಯಲ್ಲಿಯೂ ಮಾಡಲು ಸಹಾಯವಾಗುತ್ತದೆ. ಕಾರಣ ಈ ಕುರಿತು 02 ದಿನಗಳ ಪೋಷಕರ ತರಬೇತಿ ಮತ್ತು ವೈದ್ಯಕೀಯ ಶಿಬಿರಗಳಲ್ಲಿ ಅಗತ್ಯ ತಿಳುವಳಿಕೆ ನೀಡಲು ಕ್ರಮ ಮಾಡುವುದು. ಇಷ್ಟಾಗಿಯೂ ಸದರಿ ಮಕ್ಕಳನ್ನು ಕೇಂದ್ರಗಳಿಗೆ ಕರೆತರುವ ಅನಿವಾರ್ಯತೆಯಿದ್ದರೆ, ಪೋಷಕರು/ಸಹಾಯಕರು ಈ ಮಕ್ಕಳನ್ನು ಸಂಪನ್ಮೂಲ ಕೇಂದ್ರಗಳಿಗೆ ವಾರದಲ್ಲಿ 2 ದಿನಗಳು ಕರೆದುಕೊಂಡು ಹೋಗಬೇಕಾಗಿರುವುದರಿಂದ ಇವರಿಗೆ ಒಂದು ತಿಂಗಳಿಗೆ ಪ್ರತಿ ಮಗುವಿಗೆ ರೂ. 200/-ರಂತೆ ಸಾರಿಗೆ ಸೌಲಭ್ಯಕ್ಕಾಗಿ ಅನುದಾನ ನೀಡಬೇಕು. ಈ ಹಣವನ್ನು ಪೋಷಕರಿಗೆ ಚೆಕ್ ಮೂಲಕ ಪ್ರತಿ ತಿಂಗಳು 05 ನೇ ತಾರೀಖಿನೊಳಗೆ ನೀಡತಕ್ಕದ್ದು. **ವ್ಯತ್ಯಯಗಳನ್ನು ಗಂಭೀರವಾಗಿ ಪರಿಗಣಿಸಲಾಗುತ್ತದೆ. ತಜ್ಞ ವೈದ್ಯರು ಆಗಮಿಸಿ ಫಿಜಿಯೋಥೆರಪಿ ಕೈಗೊಂಡಿದ್ದಲ್ಲಿ ಅವರಿಗೆ ಗೌರವಧನವನ್ನು ದಾನಿಗಳಿಂದ ಸಂಗ್ರಹಿಸಿ ನೀಡುವುದು.**

ಸಂಪನ್ಮೂಲ ಕೇಂದ್ರಕ್ಕೆ ಆಗಮಿಸುವ ಮಕ್ಕಳಿಗೆ, ಪೋಷಕರಿಗೆ/ಸಹಾಯಕರಿಗೆ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಸಂಪನ್ಮೂಲ ಕೇಂದ್ರದ ಸಮೀಪದಲ್ಲಿರುವ ಶಾಲೆಯಲ್ಲಿ ಏರ್ಪಾಡು ಮಾಡಬಹುದಾಗಿದೆ.

**ಕರೆಕ್ಟೀವ್ ಸರ್ಜರಿ**

ಸಮನ್ವಯ ಶಿಕ್ಷಣದಡಿಯಲ್ಲಿ ಆಯೋಜಿಸುವ ವೈದ್ಯಕೀಯ ತಪಾಸಣಾ ಶಿಬಿರದಲ್ಲಿ ಕರೆಕ್ಟೀವ್ ಸರ್ಜರಿಗಾಗಿ ವೈದ್ಯರು ಶಿಫಾರಸ್ಸು ಮಾಡಿದ ಮಕ್ಕಳಿಗೆ 2010-11 ರ ವಾರ್ಷಿಕ ಕ್ರಿಯಾ ಯೋಜನೆ ಅನುಮೋದನೆ ಮಿತಿಯೊಳಗೆ ಮಾತ್ರ ಕರೆಕ್ಟೀವ್ ಸರ್ಜರಿಗೆ ಪರಿಗಣಿಸುವುದು. PAB 2010-11 ರಡಿಯಲ್ಲಿ ಪ್ರತಿ ಜಿಲ್ಲೆಯಲ್ಲಿ ಗರಿಷ್ಠ 80 ಮಕ್ಕಳನ್ನು ಕರೆಕ್ಟೀವ್ ಸರ್ಜರಿಗೆ ಒಳಪಡಿಸಲು ಅವಕಾಶ ಕಲ್ಪಿಸಿದೆ. ಪ್ರತಿ ಮಗುವಿನ ಘಟಕ ವೆಚ್ಚ ರೂ 8000/- ಗಳನ್ನು ನಿಗದಿಪಡಿಸಿದೆ. ಸದರಿ ಕಾರ್ಯಕ್ಕಾಗಿ ಈ ಕೆಳಕಂಡ ಸೂಚನೆಗಳನ್ನು ಪಾಲಿಸುವುದು.

- ವೈದ್ಯರ ಸಲಹೆ ಮೇರೆಗೆ ನ್ಯೂನ್ಯತೆವಾರು ಗುರುತಿಸಲ್ಪಟ್ಟ ಮಕ್ಕಳ ಪಟ್ಟಿಯನ್ನು ಸಿದ್ಧಪಡಿಸುವುದು.
- ವೈದ್ಯರ ಸಲಹೆಯಂತೆ ನ್ಯೂನ್ಯತೆವಾರು ಸರ್ಜರಿಗೆ ತಗಲುವ ನಿಖರವಾದ ಮೊತ್ತವನ್ನು ನಿರ್ದಿಷ್ಟಪಡಿಸುವುದು.
- ಅವಶ್ಯಕತೆ ಇದ್ದಲ್ಲಿ ಸರ್ಕಾರೇತರ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಹೆಚ್ಚಿನ ಧನ ಸಹಾಯವನ್ನು ಪಡೆಯುವುದು.
- ಕ್ರಿಯಾ ಯೋಜನೆಯಲ್ಲಿ ಈ ಚಟುವಟಿಕೆಗೆ ನಿಗದಿಪಡಿಸಿರುವ ಅನುದಾನದ ಮಿತಿಯಲ್ಲಿ ಅರ್ಹ ಮಕ್ಕಳಿಗೆ ಕರೆಕ್ಟೀವ್ ಸರ್ಜರಿಯನ್ನು ಮಾಡಿಸಲು ಕ್ರಮ ವಹಿಸುವುದು. ಹೆಚ್ಚುವರಿ ಚಟುವಟಿಕೆಗಳನ್ನು ಅಯೋಜಿಸಲು ಅವಕಾಶವಿರುವುದಿಲ್ಲ.
- ಕರೆಕ್ಟೀವ್ ಸರ್ಜರಿಗೆ ಒಳಪಡುವ ಮುನ್ನ ಮತ್ತು ನಂತರ ವಿವರಗಳೊಂದಿಗೆ ಮಗುವಿನ ಭಾವ ಚಿತ್ರವನ್ನು ಖಡ್ಡಾಯವಾಗಿ ದಾಖಲಿಸುವುದು.
- ಕರೆಕ್ಟೀವ್ ಸರ್ಜರಿಗೆ ಒಳಪಡುವ ಮಕ್ಕಳಲ್ಲಿ ಹೆಚ್ಚಿನ ಅನುದಾನದ ಅವಶ್ಯಕತೆಯಿದ್ದಲ್ಲಿ ಮಕ್ಕಳ ಪಟ್ಟಿಯನ್ನು ಸಿದ್ಧಪಡಿಸಿ ಡಿ.ಡಿ.ಪಿ.ಐ ರವರ ಹಂತದಲ್ಲಿ ರೂ 25,000/- ಮತ್ತು ಜಿಲ್ಲಾ ಪಂಚಾಯತ್ ಹಂತದಲ್ಲಿ ಗರಿಷ್ಠ ರೂ 50,000/- ಗಳನ್ನು ಕರೆಕ್ಟೀವ್ ಸರ್ಜರಿಗೆ ಮಂಜೂರಾತಿ ಸಮನ್ವಯ ಶಿಕ್ಷಣ ಅನುದಾನದ ಮಿತಿಯೊಳಗೆ ನೀಡಬಹುದು. ಬೇರೆ ಮೂಲದಿಂದ ದೊರೆತ ಅನುದಾನ ಕಡಿಮೆ

ಬಿದ್ದಾಗ ಮಾತ್ರ ಅನುಮತಿಸತಕ್ಕದ್ದು. ಮಂಜೂರಾತಿ ಸಂಬಂಧ ಪ್ರತ್ಯೇಕ ವಹಿ ನಿರ್ವಹಿಸುವುದು ಮತ್ತು ರಶೀತಿಗಳನ್ನು ಕಾಯ್ದಿರಿಸುವುದು.

**ಸೂಚನೆ: ಕರೆಕ್ಟೀವ್ ಸರ್ಜರಿಗೆ ಭಾಗವಹಿಸುವ ಮಗು ಮತ್ತು ಸದರಿ ಮಗುವನ್ನು ಕರೆತರುವ ಪೋಷಕರಿಗೆ ಪ್ರಯಾಣ ಭತ್ಯೆಯನ್ನು ನೀಡಲು ಅವಕಾಶವಿರುವುದಿಲ್ಲ. ಆದಾಗ್ಯೂ ಅನಿವಾರ್ಯತೆಯಿದ್ದಲ್ಲಿ ನಿಗದಿತ ಅನುದಾನದ ಮಿತಿಯೊಳಗೆ ಭರಿಸುವುದು.**

**ಮುದ್ರಣ ಮತ್ತು ಪ್ರಚಾರ ಸಾಮಗ್ರಿಗಳನ್ನು ಸಿದ್ದಗೊಳಿಸುವುದು.**

ಸಮನ್ವಯ ಶಿಕ್ಷಣದ ಜಾಗೃತಿಯನ್ನು ಮೂಡಿಸಲು ಪ್ರಚಾರ ಸಾಮಗ್ರಿಗಳೂ ಪೂರಕ ಪಾತ್ರವನ್ನು ನಿರ್ವಹಿಸುತ್ತವೆ. ಕಾರಣ ಜಿಲ್ಲಾ ಹಂತದಲ್ಲಿ ಬ್ರೋಚರ್ಸ್ ಹಾಗೂ ಪೋಸ್ಟರ್ಸ್ ಗಳನ್ನು ಮುದ್ರಿಸಿ ವಿತರಿಸಲು ರೂ 1.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಮುದ್ರಣದ ಸಾಹಿತ್ಯದಲ್ಲಿ ಸಮನ್ವಯ ಶಿಕ್ಷಣದ ಉದ್ದೇಶ, ಸರ್ವ ಶಿಕ್ಷಣ ಅಭಿಯಾನ ಯೋಜನೆಯ ಅಡಿಯಲ್ಲಿ ನಿರ್ವಹಿಸುತ್ತಿರುವ ಕಾರ್ಯಚಟುವಟಿಕೆಗಳು, ಇವುಗಳಲ್ಲದೆ CWSN ಮಕ್ಕಳ ನಿರ್ವಹಣೆಯಲ್ಲಿ ಪೋಷಕರು ಮತ್ತು ಸಮುದಾಯದ ಪಾತ್ರ, ಸರ್ಕಾರಿ ಸೌಲಭ್ಯಗಳ ಪರಿಚಯ, ವೈದ್ಯಕೀಯ ನೆರವು, ಸಾಧಕರ ಪರಿಚಯ ಮತ್ತು ಈ ಮಕ್ಕಳ ಯಶೋಗಾಥೆ ಇವೇ ಮುಂತಾದ ಉಪಯುಕ್ತ ಮಾಹಿತಿಗಳನ್ನು ಮುದ್ರಿಸಿ ಪರಿಣಾಮಕಾರಿಯಾಗಿ ಪ್ರಚಾರ ಕೈಗೊಳ್ಳುವುದು. ಮುದ್ರಿಸುವ ಪ್ರಚಾರ ಸಾಮಗ್ರಿಗಳು ಜಾಗೃತಿ ಶಿಬಿರಗಳಲ್ಲಿ, ತರಬೇತಿ ಕಾರ್ಯಕ್ರಮಗಳಲ್ಲಿ ಬಳಸುವಂತೆಯೂ ಇರಬೇಕು ಮತ್ತು ಈ ಸಾಮಗ್ರಿಗಳು ಪ್ರತಿ ಶಾಲೆಯನ್ನು ತಲುಪುವ ವ್ಯವಸ್ಥೆ ಮಾಡಬೇಕು ಮತ್ತು ಶಾಶ್ವತ ದಾಖಲೆಯಾಗುವಂತೆ ಕ್ರಮ ವಹಿಸುವುದು.

**ಸಾಮಾನ್ಯ ಮಕ್ಕಳೊಂದಿಗೆ ವಿಶೇಷ ಅಗತ್ಯವುಳ್ಳ ಮಕ್ಕಳ ಶೈಕ್ಷಣಿಕ ಪ್ರವಾಸ.**

ಸರ್ವ ಶಿಕ್ಷಣ ಅಭಿಯಾನ ಯೋಜನೆಯ ಆವಿಷ್ಕೃತ ಚಟುವಟಿಕೆಯ ಮಧ್ಯವರ್ತನೆಯಡಿಯಲ್ಲಿ ಈಗಾಗಲೇ ಪ್ರತಿ ವರ್ಷ ಚಿಣ್ಣರ ಜಿಲ್ಲಾ ದರ್ಶನ ಎಂಬ ಕಾರ್ಯ ಚಟುವಟಿಕೆಯನ್ನು 06 ರಿಂದ 14 ವಯೋಮಾನದ ಆಯ್ದ ಮಕ್ಕಳಿಗೆ ಪ್ರತಿ ಬ್ಲಾಕ್‌ನಲ್ಲಿ ನಿರ್ವಹಿಸಲಾಗುತ್ತಿದೆ. ಸದರಿ ಪ್ರವಾಸದಲ್ಲಿ 05% ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಅವಕಾಶವನ್ನು ಕಾಯ್ದಿರಿಸಲಾಗಿದೆ. ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಹೆಚ್ಚಿನ ಅವಕಾಶ ಕಲ್ಪಿಸಲು ಹಾಗೂ ಸಾಮಾನ್ಯ ಮಕ್ಕಳೊಂದಿಗೆ ಬೆರೆತು ಸೌಹಾರ್ದಯುತ ಮನೋಭಾವನೆಯನ್ನು ಮಕ್ಕಳಲ್ಲಿ ಬೆಳೆಸಲು ಸಮನ್ವಯ ಶಿಕ್ಷಣದಡಿಯಲ್ಲಿ ಈ ಶೈಕ್ಷಣಿಕ ಪ್ರವಾಸವನ್ನು ಯೋಜಿಸಿದೆ.

ಪ್ರತಿ ಜಿಲ್ಲೆಯಲ್ಲಿ ಒಟ್ಟು 200 ಮಕ್ಕಳಿಗೆ ಪ್ರವಾಸವನ್ನು ಹಮ್ಮಿಕೊಳ್ಳಲು ರೂ. 1.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಜಿಲ್ಲೆಯ ಪ್ರತಿ ಬ್ಲಾಕ್‌ನಲ್ಲಿಯೂ ಈ ಕಾರ್ಯಕ್ರಮವನ್ನು ಆಯೋಜಿಸಲು ಕ್ರಮ ವಹಿಸುವುದು. ಈ ಪ್ರವಾಸಕ್ಕೆ 75:25 ಅನುಪಾತದಲ್ಲಿ ಅಂದರೆ, 75% CWSN ಮಕ್ಕಳು 25% ಸಾಮಾನ್ಯ ಮಕ್ಕಳನ್ನು ಆಯ್ಕೆ ಮಾಡಿಕೊಳ್ಳುವುದು. ಪ್ರವಾಸದಲ್ಲಿ ಪ್ರತಿ 10 ಮಕ್ಕಳಿಗೆ ಒಬ್ಬ ಶಿಕ್ಷಕರಂತೆ ಜವಾಬ್ದಾರಿ ನಿರ್ವಹಿಸುವಂತೆ ಕ್ರಮ ವಹಿಸುವುದು. ಸಮನ್ವಯ ಶಿಕ್ಷಣದ ದೀರ್ಘಕಾಲದ ತರಬೇತಿಯನ್ನು ಪಡೆದ ಶಿಕ್ಷಕರನ್ನು ಆಯ್ಕೆಮಾಡಿಕೊಂಡು ಪ್ರವಾಸಕ್ಕೆ ನಿಯೋಜಿಸುವುದು. ಬಿಡುಗಡೆಯಾದ ಅನುದಾನದಲ್ಲಿ ಪ್ರತಿ ಮಗುವಿಗೆ ಘಟಕ ವೆಚ್ಚವನ್ನು ರೂ. 500/- ರಂತೆ ಭರಿಸುವುದು. ಪ್ರವಾಸವು ಜಿಲ್ಲೆಯ ಪ್ರಸಿದ್ಧ ಐತಿಹಾಸಿಕ ಮತ್ತು ಶೈಕ್ಷಣಿಕ ಸ್ಥಳಗಳ ವೀಕ್ಷಣೆ ಹಾಗೂ ಪಠ್ಯಕ್ರಮಕ್ಕೆ ಪೂರಕವಾಗಿ ಇರುವಂತೆ ಮತ್ತು ಮಕ್ಕಳ ಕಲಿಕೆಗೆ ಇಂಬು ಕೊಡುವಂತಿರಬೇಕು. ಪ್ರವಾಸದಿಂದ ಆಗಮಿಸಿದ ನಂತರ ಮಕ್ಕಳಿಂದ ಪ್ರವಾಸದ **ಕಥನ** ಬರೆಸಿ ದಾಖಲಿಸುವುದು. ದಾಖಲೆಯನ್ನು, ಚಿಣ್ಣರ ಜಿಲ್ಲಾ ದರ್ಶನಕ್ಕೆ ನಿರ್ವಹಿಸಿದಂತೆಯೇ ನಿರ್ವಹಿಸುವುದು. ಈ ಸಂಬಂಧ ಕೆಳಗೆ ನೀಡಲಾಗಿರುವ ಸೂಚನೆಯನ್ನು ಪಾಲಿಸುವುದು.

- 200 ಮಕ್ಕಳಿಗೆ ಬಿಡುಗಡೆಯಾಗಿರುವ ಅನುದಾನವನ್ನು, ಜಿಲ್ಲೆಯ ಒಟ್ಟು ಬ್ಲಾಕ್ ಗಳಿಗೆ ಸಮಾನವಾಗಿ ಹಂಚಿ ಈ ಸಂಖ್ಯೆಯ ಮಕ್ಕಳು ಸದರಿ ಬ್ಲಾಕ್‌ನಿಂದ ನೇರವಾಗಿ ಪ್ರವಾಸ ಹೋಗಲು ಯೋಜಿಸುವುದು.
- ಸಮನ್ವಯ ಶಿಕ್ಷಣದ ಬಗ್ಗೆ ಆಸಕ್ತಿ ಮತ್ತು ಅರ್ಪಣಾ ಮನೋಭಾವದಿಂದ ಕರ್ತವ್ಯ ನಿರ್ವಹಿಸುತ್ತಿರುವ ಐ.ಇ.ಆರ್.ಟಿ/ಶಿಕ್ಷಕರಿಗೆ ಈ ಮಕ್ಕಳ ಪ್ರವಾಸ ನಿರ್ವಹಿಸುವ ಜವಾಬ್ದಾರಿಯನ್ನು ನೀಡುವುದು.

- ಪ್ರವಾಸಕ್ಕೆ ಆಯ್ಕೆ ಮಾಡುವಾಗ ಗೊಂದಲಕ್ಕೆ ಅವಕಾಶವಾಗದಂತೆ ಎಲ್ಲಾ ವರ್ಗದ ಮಕ್ಕಳಿಗೂ ಸಮಾನ ಅವಕಾಶ ಕಲ್ಪಿಸಲು ಕ್ರಮ ಮಾಡುವುದು.

**ಪೂರ್ಣ ದೃಷ್ಠಿ ದೋಷವುಳ್ಳ ಮಕ್ಕಳಿಗೆ ಬ್ರೈಲ್ ಕಿಟ್ ಮತ್ತು ಕೇನ್‌ಗಳ ಪೂರೈಕೆ.**

2010-11 ನೇ ಸಾಲಿಗೆ ಸಮೀಕ್ಷೆಯಲ್ಲಿ ಗುರುತಿಸಿದ ಪೂರ್ಣ ದೃಷ್ಠಿ ದೋಷವುಳ್ಳ ಮಕ್ಕಳಿಗೆ ಬ್ರೈಲ್ ಕಿಟ್ ಮತ್ತು ಕೇನ್‌ಗಳನ್ನು ಪೂರೈಸಲು ಪ್ರತಿ ಮಗುವಿಗೆ ಘಟಕ ವೆಚ್ಚ ರೂ 1000/- ಅನುಮೋದನೆಯಾಗಿದೆ. ನಿಯಮಾನುಸಾರ ಸದರಿ ಕಿಟ್ ಹಾಗೂ ಕೇನ್‌ಗಳನ್ನು ಖರೀದಿಸಿ ಮಕ್ಕಳಿಗೆ ತಲುಪುವಂತೆ ಕ್ರಮ ಮಾಡುವುದು. ಈ ಪ್ರಕ್ರಿಯೆಯನ್ನು ಆಗಸ್ಟ್ ತಿಂಗಳೊಳಗೆ ಪೂರ್ಣಗೊಳಿಸುವುದು. ಈ ಸಾಮಗ್ರಿಗಳ ಲಭ್ಯತೆಯ ಬಗ್ಗೆ NAB ( The National Association for the Blind ) ಸಂಸ್ಥೆಯನ್ನು ಸಂಪರ್ಕಿಸಬಹುದು. ಈ ಸಂಸ್ಥೆಯ ವಿಳಾಸ : ದಿ ನ್ಯಾಷನಲ್ ಅಸೋಸಿಯೇಷನ್ ಫಾರ್ ದಿ ಬ್ಲೈಂಡ್, ಸಿ.ಐ. ನಿವೇಶನ ಸಂಖ್ಯೆ 4, ಎನ್.ಎ.ಬಿ ರಸ್ತೆ, ಜೀವನ ಭೀಮಾನಗರ, ಬೆಂಗಳೂರು – 560075.

**ಶಿಕ್ಷಕರಿಗೆ 05 ದಿನಗಳ ಅಲ್ಪಾವಧಿಯ ಸಮನ್ವಯ ಶಿಕ್ಷಣ ತರಬೇತಿ**

ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಸಾಮಾನ್ಯ ಶಾಲೆಗಳಿಗೆ ದಾಖಲು ಮಾಡಲಾಗುತ್ತಿದೆ. ಈ ಶಾಲೆಗಳ ಶಿಕ್ಷಕರು ವಿಶೇಷ ಅಗತ್ಯತೆವುಳ್ಳ ಮಕ್ಕಳನ್ನು ಇತರೆ ಮಕ್ಕಳೊಂದಿಗೆ ಸಮನ್ವಯಗೊಳಿಸಿಕೊಂಡು ಬೋಧಿಸುವ ಅಗತ್ಯವಿದೆ. ಈ ಶಿಕ್ಷಕರಿಗೆ 05 ದಿನದ ತರಬೇತಿಯನ್ನು ನೀಡಿದಲ್ಲಿ ಪರಿಣಾಮಕಾರಿಯಾಗಿ ತರಗತಿ ನಿರ್ವಹಿಸಲು ಸಾಧ್ಯವಾಗವಹುದೆಂಬ ಆಶಯದೊಂದಿಗೆ 3-5 ದಿನಗಳ ತರಬೇತಿಯನ್ನು "ಶಿಕ್ಷಕರ ತರಬೇತಿ" ಶೀರ್ಷಿಕೆಯಡಿಯಲ್ಲಿ ನೀಡಲಾಗಿದೆ. 2010-11 ನೇ ಸಾಲಿನಲ್ಲಿ ಈ ತರಬೇತಿಯನ್ನು "ಸಮನ್ವಯ ಶಿಕ್ಷಣ" ಮಧ್ಯವರ್ತನೆಯಡಿಯಲ್ಲಿ ಆಯೋಜಿಸುವುದು. ರಾಜ್ಯ ಕಛೇರಿಯಿಂದ ಕಳೆದ ಶೈಕ್ಷಣಿಕ ಸಾಲಿನಲ್ಲಿ ನೀಡಲಾಗಿರುವ ಸಮನ್ವಯ ಶಿಕ್ಷಣ ಬೋಧಕರ ಕೈಪಿಡಿಯನ್ನು ಜಿಲ್ಲಾ ಹಂತದಲ್ಲಿ ಸಮನ್ವಯ ಶಿಕ್ಷಣ ಸಂಪನ್ಮೂಲ ಶಿಕ್ಷಕರ ಸಂಪನ್ಮೂಲ ತಂಡದಿಂದ ಪರಿಷ್ಕರಿಸುವುದು. 2010-11 ನೇ ಸಾಲಿನಲ್ಲಿ ಗುರುತಿಸಲಾಗಿರುವ ವಿವಿಧ ವಿಕಲತೆವಾರು ಅಂಶಗಳನ್ನು ಪರಿಷ್ಕರಣ ಸಾಹಿತ್ಯದಲ್ಲಿ ಅಳವಡಿಸಲು ಕ್ರಮ ಮಾಡುವುದು. ವಿಶೇಷವಾಗಿ ಕಲಿಕಾ ನ್ಯೂನ್ಯತೆಯ ಸಮಸ್ಯೆಯನ್ನು ಎದುರಿಸುತ್ತಿರುವ ಮಕ್ಕಳ ಕುರಿತು ಮಾಹಿತಿಯನ್ನು ವಿವರವಾಗಿ ಅಳವಡಿಸಿ ಕನಿಷ್ಠ 02 ದಿನಗಳ ಕಾಲ ಈ ವಿಷಯದಲ್ಲಿ AIISH ಮೈಸೂರು ವತಿಯಿಂದ ನೀಡಿರುವ ಸಾಹಿತ್ಯಕ್ಕೆ ಅನುಗುಣವಾಗಿ ತರಬೇತಿ ನೀಡಲು ಕ್ರಮ ಮಾಡುವುದು. ಪ್ರತಿ ಬ್ಲಾಕ್ ನಲ್ಲಿ 50 ಮಂದಿ ಶಿಕ್ಷಕರಿಗೆ ತರಬೇತಿಯನ್ನು ಆಯೋಜಿಸುವುದು. ಹಿಂದಿನ ವರ್ಷಗಳಲ್ಲಿ ತರಬೇತಿಯಾಗದ ಶಿಕ್ಷಕರನ್ನು ಈ ತರಬೇತಿಗೆ ನಿಯೋಜಿಸಲು ಕ್ರಮ ಮಾಡುವುದು. ಶಿಬಿರಾರ್ಥಿಗಳಿಗೆ ಒಂದು ದಿನಕ್ಕೆ ಗರಿಷ್ಠ 100/- ರೂಗಳ ಘಟಕ ವೆಚ್ಚ ಭರಿಸಲು ಅವಕಾಶವಿದೆ.

**ಶಿಕ್ಷಣ ಇಲಾಖೆಯ ಮೇಲುಸ್ತುವಾರಿ ಸಿಬ್ಬಂದಿ ವರ್ಗದವರಿಗೆ ಜಿಲ್ಲಾ ಹಂತದ ತರಬೇತಿ**

ಬಿ.ಇ.ಒ ಹಾಗೂ ಡಿ.ಡಿ.ಪಿ.ಐ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇ.ಸಿ.ಒ ಶಿಕ್ಷಣಾಧಿಕಾರಿಗಳು, ವಿಷಯ ಪರಿವೀಕ್ಷಕರು, ಜಿಲ್ಲಾ ಹಾಗೂ ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿಗಳು, ಜಿಲ್ಲಾ ಹಾಗೂ ತಾಲ್ಲೂಕು ಅಕ್ಷರ ದಾಸೋಹ ಅಧಿಕಾರಿಗಳಿಗೆ ಮತ್ತು ಡಯಟ್‌ನ ಎಲ್ಲಾ ಹಿರಿಯ ಉಪನ್ಯಾಸಕರುಗಳಿಗೆ ಸಮನ್ವಯ ಶಿಕ್ಷಣದಡಿಯಲ್ಲಿ CWSN ಮಕ್ಕಳ ಕುರಿತು ನ್ಯೂನ್ಯತೆವಾರು ಮಾಹಿತಿಯನ್ನು ತಿಳಿಸಿಕೊಡುವ ಸಲುವಾಗಿ ಈ ಚಟುವಟಿಕೆಯನ್ನು ಯೋಜಿಸಲಾಗಿದೆ. ಇದರಿಂದಾಗಿ ಸಮನ್ವಯ ಶಿಕ್ಷಣ ಮಧ್ಯವರ್ತನೆಯ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವಲ್ಲಿ ಸದರಿಯವರೂ ಪ್ರಮುಖ ಪಾತ್ರ ವಹಿಸಬಹುದೆಂಬ ವ್ಯಾಪಕ ಉದ್ದೇಶವನ್ನು ಹೊಂದಲಾಗಿದೆ. ಕಾರಣ ಸದರಿ ಅಧಿಕಾರಿಗಳಿಗೆ ಸಮನ್ವಯ ಶಿಕ್ಷಣ ಕುರಿತು ಒಂದು ದಿನದ ತರಬೇತಿಯನ್ನು ಜಿಲ್ಲಾ ಹಂತದಲ್ಲಿ ಆಯೋಜಿಸುವುದು. ಪ್ರತಿ ಶಿಬಿರಾರ್ಥಿಗೆ ಘಟಕ ವೆಚ್ಚ ರೂ 200/- ರಂತೆ ವೆಚ್ಚ ಭರಿಸುವುದು. ಈ ತರಬೇತಿಯನ್ನು ಜುಲೈ ತಿಂಗಳಿನಲ್ಲಿ ನೀಡುವುದು. ಡಿ.ಐ..ಇ.ಆರ್.ಟಿ ಗಳನ್ನು ನುರಿತ ಐ.ಇ.ಆರ್.ಟಿ ಗಳನ್ನು ಈ ತರಬೇತಿಗೆ ಸಂಪನ್ಮೂಲ ವ್ಯಕ್ತಿಗಳನ್ನಾಗಿ ನಿಯೋಜಿಸುವುದು.

**CWSN ಸಮೀಕ್ಷೆ.**

ಈ ಚಟುವಟಿಕೆಯಡಿಯಲ್ಲಿ 2011–12 ನೇ ಸಾಲಿನ CWSN ಮಕ್ಕಳನ್ನು ಗುರುತಿಸಲು ಸಮೀಕ್ಷೆ ನಿರ್ವಹಿಸಲು ಹಾಗೂ 5% ಆಂಶಿಕ ಪರಿಶೀಲನೆಗಾಗಿ (Sample Check) ಪ್ರತಿ ಜಿಲ್ಲೆಗೆ ರೂ 1.00 ಲಕ್ಷ ಅನುದಾನವನ್ನು ಅನುಮೋದನೆ ಮಾಡಿದೆ. ಈ ಅನುದಾನದಲ್ಲಿ ಜಿಲ್ಲೆಯವರು ಈ ಕೆಳಗಿನ 03 ಕಾರ್ಯಕ್ರಮಗಳನ್ನು ನಿರ್ವಹಿಸಬೇಕಾಗಿದೆ.

- 2010–11 ನೇ ಸಾಲಿಗೆ ಸಂಬಂಧಿಸಿದಂತೆ 1% ಕ್ಕಿಂತ ಕಡಿಮೆ ಹಾಗೂ 3% ಕ್ಕಿಂತ ಹೆಚ್ಚು ಮಕ್ಕಳನ್ನು ಗುರುತಿಸಿರುವ ಜಿಲ್ಲೆಗಳಲ್ಲಿ ಮರು ಗಣತಿಯನ್ನು ಜುಲೈ ತಿಂಗಳಲ್ಲಿ ತಪ್ಪದೇ ಮಾಡುವುದು.
- 2010–11 ನೇ ಸಾಲಿನ ಸಮೀಕ್ಷೆಗೆ ಸಂಬಂಧಿಸಿದಂತೆ ಅಂಕಿ ಅಂಶಗಳನ್ನು ದೃಢಪಡಿಸಿಕೊಳ್ಳಲು, ಎಲ್ಲಾ ಜಿಲ್ಲೆಯವರು ಆಗಸ್ಟ್ ತಿಂಗಳಿನಲ್ಲಿ 5% ರಷ್ಟು Sample Check ಮಾಡುವುದು.
- 2011–12 ನೇ ಸಾಲಿನ ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಗುರುತಿಸಲು ಸಮೀಕ್ಷೆ ನಡೆಸಲು ನಿಯೋಜಿಸುವ ಶಿಕ್ಷಕರಿಗೆ ವ್ಯಾಪಕವಾದ ತರಬೇತಿ ನೀಡಿ ಡಿಸೆಂಬರ್ ತಿಂಗಳಿನಲ್ಲಿ ವಿಶೇಷ ಸಮೀಕ್ಷೆ ನಡೆಸುವುದು. ಗುರುತಿಸಲ್ಪಡುವ 10 ವಿಧದ ವಿಶೇಷ ಅಗತ್ಯವುಳ್ಳ ಮಕ್ಕಳ ಅಂಕಿ ಅಂಶಗಳನ್ನು 2012 ರ ಜನವರಿ 12 ರೊಳಗೆ ರಾಜ್ಯ ಕಛೇರಿಗೆ ನೀಡುವುದು.

**ಸೂಚನೆ: ಅನುದಾನವನ್ನು ಬಿಡುಗಡೆಯಾಗಿರವ ಅನುದಾನದ ಮಿತಿಗೆ ಒಳಪಟ್ಟು ಖರ್ಚು ಭರಿಸುವುದು.**

**ರ್‍ಯಾಂಪ್ಸ್‌ಗಳ ನಿರ್ಮಾಣ**

ಪ್ರತಿ ಶಾಲೆಯಲ್ಲಿಯೂ ವಿಶೇಷ ಅಗತ್ಯವುಳ್ಳ ಮಕ್ಕಳು ನಿರಾಯಾಸವಾಗಿ ಶಾಲಾ ಕೊಠಡಿಯನ್ನು ಪ್ರವೇಶಿಸಲು ಅನುಕೂಲವಾಗುವಂತೆ ರ್‍ಯಾಂಪ್ಸ್ ಗಳನ್ನು ನಿರ್ಮಿಸಬೇಕೆಂಬುದು ಸಮನ್ವಯ ಶಿಕ್ಷಣದ ಪ್ರಧಾನ ಆಶಯಗಳಲ್ಲಿ ಒಂದು. ರಾಜ್ಯ ಕಛೇರಿಯ ಸಿವಿಲ್ ಕಾಮಗಾರಿ ಶಾಖೆಯಿಂದ ನೀಡಿರುವ Specifications ಗೆ ಅನುಗುಣವಾಗಿ ನಿರ್ಮಿಸುವುದು. ಕೆಲವು ಜಿಲ್ಲೆಗಳಲ್ಲಿ 50% ಕ್ಕಿಂತ ಕಡಿಮೆ ಶಾಲೆಗಳಲ್ಲಿ ರ್‍ಯಾಂಪ್ಸ್ ನಿರ್ಮಿಸಲಾಗಿದೆ. ಇದೊಂದು ಗಂಭೀರವಾಗಿ ಪರಿಗಣಿಸಬೇಕಾದ ಅಂಶ. ಕಾರಣ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಜಿಲ್ಲಾವಾರು ಅನುಮೋದನೆಯಂತೆ ರ್‍ಯಾಂಪ್ಸ್ ಗಳನ್ನು ಸೆಪ್ಟೆಂಬರ್ ತಿಂಗಳಿನ ಒಳಗಾಗಿ ನಿರ್ಮಿಸುವುದು. ಜಿಲ್ಲೆಗಳಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಚುನಾವಣಾ ಸಮಯದಲ್ಲಿ ನಿರ್ಮಿಸಲಾಗಿರುವ ರ್‍ಯಾಂಪ್ಸ್ ಅನ್ನು ದುರಸ್ಥಿ ಮಾಡಿಸಿ ಸರ್ವ ಶಿಕ್ಷಣ ಅಭಿಯಾನದ ಮಾರ್ಗಸೂಚಿಯಂತೆ ಸರಿಪಡಿಸುವುದು.

**ದೃಷ್ಠಿ ಮಾಂಧ್ಯ ಚೇತನರಿಗೆ ಡೈಸಿ (DAISY Software) ಸಾಫ್ಟ್‌ವೇರ್ ನ್ನು ಅಭಿವೃದ್ದಿಪಡಿಸುವುದು.**

ಪೂರ್ಣ ದೃಷ್ಠಿ ಮಾಂಧ್ಯ ಚೇತನರಿಗೆ ಕಂಪ್ಯೂಟರ್ ಆಧರಿಸಿ DAISY Software ಮೂಲಕ ಪರಿಣಾಮಕಾರಿಯಾಗಿ ಪಠ್ಯಕ್ರಮವನ್ನು ಮನನ ಮಾಡಿಸಬಹುದೆಂದು ಸಮರ್ಥನಂ ಎಂಬ ಸರ್ಕಾರೇತರ ಸಂಸ್ಥೆಯೊಂದು ಪ್ರಸ್ತಾವನೆ ಸಲ್ಲಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಪ್ರಾಯೋಗಿಕವಾಗಿ (Pilot basis) ಈ ಮಕ್ಕಳನ್ನು ಹೆಚ್ಚಾಗಿ ಗುರುತಿಸಿರುವ ಜಿಲ್ಲೆಗಳಾದ ಬೆಳಗಾಂ, ದಾವಣಗೆರೆ, ಕೊಪ್ಪಳ, ಮತ್ತು ತುಮಕೂರು ಜಿಲ್ಲೆಗಳಲ್ಲಿ ಈ ಸಾಫ್ಟ್‌ವೇರ್ Format ನಲ್ಲಿ ಪಠ್ಯ ಪುಸ್ತಕಗಳನ್ನು ಅಳವಡಿಸಿ ಬೋಧನಾ ಕ್ರಮವನ್ನು ಜಾರಿಗೊಳಿಸಲು ನಿರ್ಧರಿಸಿದೆ. ಕಾರಣ ಸದರಿ ಜಿಲ್ಲೆಗಳಿಗೆ ಈ ಉದ್ದೇಶಕ್ಕಾಗಿ ತಲಾ ರೂ 1.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡಿದೆ.

**ಸಮನ್ವಯ ಶಿಕ್ಷಣ ಸಂಪನ್ಮೂಲ ವ್ಯಕ್ತಿಗಳ (ಐ.ಇ.ಆರ್.ಟಿ) ಹುದ್ದೆಗಳನ್ನು ಭರ್ತಿ ಮಾಡುವ ಮತ್ತು ವೇತನ ನೀಡುವ ಬಗ್ಗೆ.**

ಪ್ರತಿ ಬ್ಲಾಕ್‌ಗೆ ಮಂಜೂರಾಗಿರುವ 3 ಐ.ಇ.ಆರ್.ಟಿಗಳ ಹುದ್ದೆಗಳು ಖಾಲಿ ಇದ್ದಲ್ಲಿ, ಅದನ್ನು ಅರ್ಹತೆ ಹೊಂದಿರುವ ಶಿಕ್ಷಕರನ್ನು ಆ ಹುದ್ದೆಗೆ ಪೂರ್ಣಕಾಲಿಕವಾಗಿ ನಿಯೋಜಿಸುವುದು. 2005 – 06 ರಲ್ಲಿ ಬಿ.ಆರ್.ಸಿಗಳಲ್ಲಿ ಮಂಜೂರಾಗಿರುವ 3 ಹುದ್ದೆಗಳಲ್ಲಿ, ಖಾಲಿಯಿರುವ ಐ.ಇ.ಆರ್.ಟಿ ಹುದ್ದೆಗಳಿಗೆ ಆಧ್ಯತೆಯ ಮೇಲೆ ವಿಶೇಷ ಡಿ.ಇಡಿ ಮತ್ತು ವಿಶೇಷ ಬಿ.ಇಡಿ ಶೈಕ್ಷಣಿಕ ಅರ್ಹತೆಯಿರುವ ಶಿಕ್ಷಕರನ್ನು ನಿಯೋಜಿಸುವುದು.

ಒಂದು ವೇಳೆ ಈ ಅರ್ಹತೆಯಿರುವ ಶಿಕ್ಷಕರು ಲಭ್ಯವಿಲ್ಲದಿದ್ದರೆ ಆರ್.ಸಿ.ಐ ನಿಂದ ಮಾನ್ಯತೆ ಹೊಂದಿದ ಸಂಸ್ಥೆಗಳಿಂದ 90ದಿನಗಳ ಸಮನ್ವಯ ಶಿಕ್ಷಣ ತರಬೇತಿ (ಭೋಜ್ ಯೂನಿವರ್ಸಿಟಿ) ಪಡೆದ ಶಿಕ್ಷಕರನ್ನು ಪೂರ್ಣಕಾಲಿಕವಾಗಿ ನಿಯೋಜಿಸುವುದು. ಐ.ಇ.ಆರ್.ಟಿಗಳ ವೇತನ, ಟಿ.ಎ ಮತ್ತು ಸಾದಿಲ್ವಾರನ್ನು ಕಾಲ ಕಾಲಕ್ಕೆ ತಪ್ಪದೆ ನೀಡಲು ಕ್ರಮ ಕೈಗೊಳ್ಳಬೇಕು. ಐ.ಇ.ಆರ್.ಟಿ.ಗಳಿಗೆ ವೇತನವನ್ನು ಸಮನ್ವಯ ಶಿಕ್ಷಣ ಚಟುವಟಿಕೆಯಡಿಯಲ್ಲಿ ನೀಡಬೇಕು. ಈ ಕಛೇರಿಯ ಸುತ್ತೋಲೆ 16.01.2008 ರಂತೆ ಎಫ್.ಟಿ.ಎ. ನೀಡುವುದು. ಪೂರ್ಣಕಾಲಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಐ.ಇ.ಆರ್.ಟಿ ಗಳಿಗೆ ನೀಡುತ್ತಿರುವಂತೆ ನಿಯೋಜಿತ ಐ.ಇ.ಆರ್.ಟಿ.ಗಳಿಗೂ ಸಹ ಎಫ್.ಟಿ.ಎ ಮತ್ತು ಸಾದಿಲ್ವಾರ ನ್ನು ನೀಡುವುದು.

**ವಿಶೇಷ ಶಿಕ್ಷಕರ ನೇಮಕಾತಿ ( Special Teachers )**

ರಾಜ್ಯದ 202 ಬ್ಲಾಕ್‌ಗಳಲ್ಲಿ ಪ್ರತಿ ಬ್ಲಾಕ್‌ಗೆ ತಲಾ 03 ಶಿಕ್ಷಕರಂತೆ ಸಮನ್ವಯ ಶಿಕ್ಷಣ ಸಂಪನ್ಮೂಲ ವ್ಯಕ್ತಿಗಳು (IERTs) ಹಾಲಿ ಕರ್ತವ್ಯ ನಿರ್ವಹಿಸುತ್ತಿರುವುದು ಸರಿಯಷ್ಟೆ. ಸದರಿಯವರಲ್ಲಿ 606 ಶಿಕ್ಷಕರು 90 ದಿನಗಳ ಫೌಂಡೇಶನ್ ತರಬೇತಿ ಪಡೆದವರಾಗಿರುತ್ತಾರೆ ಇದರಲ್ಲಿ ಅಂದಾಜು 40 ಶಿಕ್ಷಕರು ವಿಶೇಷ ಬಿ.ಇಡಿ/ಪಿ.ಜಿ.ಪಿ.ಡಿ/ಡಿಪ್ಲೊಮೊ ಶೈಕ್ಷಣಿಕ ಅರ್ಹತೆ ಹೊಂದಿದವರಾಗಿರುತ್ತಾರೆ. ಸದರಿ ಸಾಲಿನಲ್ಲಿ ಪ್ರತಿ ಬ್ಲಾಕ್‌ನಲ್ಲಿಯೂ ವಿಶೇಷ ಶಿಕ್ಷಣದಲ್ಲಿ ತರಬೇತಾದ, ಹೆಚ್ಚುವರಿಯಾಗಿ ಇಬ್ಬರು ವಿಶೇಷ ಶಿಕ್ಷಕರನ್ನು 2010-11 ನೇ ಸಾಲಿನಿಂದ ನೇಮಿಸಿಕೊಳ್ಳಲು ಅನುದಾನ ಅನುಮೋದನೆಯಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ವಿಶೇಷ ಡಿ.ಇಡಿ/ಬಿ.ಇಡಿ ವಿದ್ಯಾರ್ಹತೆಯನ್ನು ಹೊಂದಿದ IEDC ಯೋಜನೆಯಲ್ಲಿ ಕರ್ತವ್ಯ ನಿರ್ವಹಿಸಿದವರಿಗೆ ಪ್ರಥಮ ಆಧ್ಯತೆ ನೀಡಿ ಸರ್ಕಾರೇತರ ಸಂಸ್ಥೆಗಳ ಮೂಲಕ ನಿಯಮಾನುಸಾರ ನೇಮಿಸಿಕೊಳ್ಳಲು ಕ್ರಮ ಮಾಡುವುದು. ನೇಮಕಾತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಸೂಚನೆಗಳನ್ನು ಪಾಲಿಸುವುದು.

- ಸ್ಥಳೀಯ ದಿನಪತ್ರಿಕೆಗಳಲ್ಲಿ ಜಾಹೀರಾತು ನೀಡಿ ಆಸಕ್ತ ಸರ್ಕಾರೇತರ ಸಂಸ್ಥೆಗಳ/ಏಜೆನ್ಸಿ ಗಳಿಂದ ಟೆಂಡರ್/ಕೊಟೇಷನ್ ಮೂಲಕ ವಿಶೇಷ ಶಿಕ್ಷಕರ ನೇಮಕಾತಿಗೆ ಕ್ರಮ ವಹಿಸುವುದು.
- ವಿಶೇಷ ಡಿ.ಇಡಿ/ಬಿ.ಇಡಿ ವಿದ್ಯಾರ್ಹತೆ ಹೊಂದಿದದವರನ್ನು ವಿಶೇಷ ಶಿಕ್ಷಕರಾಗಿ ನೇಮಿಸಿಕೊಳ್ಳಲು ಕ್ರಮ ವಹಿಸುವುದು. ಆಯ್ಕೆಯಾದ ಏಜೆನ್ಸಿ/ಸರ್ಕಾರೇತರ ಸಂಸ್ಥೆಯು, , ಜಿಲ್ಲೆಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಾದ IEDC ಯಡಿಯಲ್ಲಿ ಈ ಹಿಂದೆ ಕಾರ್ಯ ನಿರ್ವಹಿಸುತ್ತಿದ್ದ, ಆಸಕ್ತ ಹಾಗೂ ಅರ್ಹ ಶಿಕ್ಷಕರನ್ನು ಗುರುತಿಸಿ, ಮೊದಲ ಆಧ್ಯತೆಯಾಗಿ ಅವರನ್ನು ವಿಶೇಷ ಶಿಕ್ಷಕರಾಗಿ ನೇಮಿಸಲು ಕ್ರಮ ಮಾಡುವುದು.
- ವಿಶೇಷ ಡಿಪ್ಲೊಮೊ ಶೈಕ್ಷಣಿಕ ಅರ್ಹತೆ (ಸ್ಪೆಷಲ್ ಡಿ.ಇಡ್) ಹೊಂದಿರುವವರಿಗೆ ಪ್ರಥಮ ಆಧ್ಯತೆ ನೀಡುವುದು. ಒಂದು ವೇಳೆ ಇವರು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿಲ್ಲದಿದ್ದ ಸಂದರ್ಭಗಳಲ್ಲಿ ವಿಶೇಷ ಬಿ.ಇಡಿ. ತರಬೇತಿ ಹೊಂದಿದವರು ಇಚ್ಛಿಸಿದಲ್ಲಿ ನೇಮಿಸಿಕೊಳ್ಳಲು ಕ್ರಮ ಮಾಡುವುದು.
- ಆಯ್ಕೆಯಾದ ಸಂಸ್ಥೆಯೊಂದಿಗೆ ನಿಯಮಾನುಸಾರ ಪರಸ್ಪರ ಒಡಂಬಡಿಕೆ ಮಾಡಿಕೊಳ್ಳುವುದು.
- ನೇಮಕವಾಗುವ ವಿಶೇಷ ಶಿಕ್ಷಕರು ಸಮರ್ಪಣಾ ಮನೋಭಾವದಿಂದ ಕರ್ತವ್ಯ ನಿರ್ವಹಿಸುವಂತೆ ಅವರಿಂದ ಒಡಂಬಡಿಕೆ ತೆಗೆದುಕೊಳ್ಳುವುದು.
- ಈ ನೇಮಕಾತಿ ಪ್ರಕ್ರಿಯೆಯನ್ನು 2010 ರ ಜೂನ್ 30 ತಾರೀಖಿನೊಳಗೆ ತಪ್ಪದೇ ಪೂರ್ಣಗೊಳಿಸುವುದು.
- ಈ 02 ಜನ ವಿಶೇಷ ಶಿಕ್ಷಕರಿಗೆ ಬ್ಲಾಕ್‌ಗಳಲ್ಲಿರುವ ಕ್ಲಸ್ಟರ್‌ಗಳನ್ನು ಸಮಾನವಾಗಿ ಹಂಚಿ, ಸಮನ್ವಯ ಶಿಕ್ಷಣ ಅನುಷ್ಠಾನ ಕಾರ್ಯದಲ್ಲಿ ಐ.ಇ.ಆರ್.ಟಿ.ಗಳೊಂದಿಗೆ ಉತ್ಸಾಹ ದಿಂದ ಪಾಲ್ಗೊಳ್ಳುವಂತೆ ಸೂಚಿಸಬೇಕು.
- ವಿಶೇಷ ಶಿಕ್ಷಕರಿಗೆ ಮಾಸಿಕವಾಗಿ ರೂ 7500/- ಗಳು ಗೌರವ ಸಂಭಾವನೆ ಮತ್ತು ರೂ 500/-ಗಳು ನಿಗಧಿತ ಪ್ರಯಾಣ ಭತ್ಯೆಯನ್ನು ನೀಡುವುದು.
- ಆಯ್ಕೆಯಾದ ಸಂಸ್ಥೆ/ಏಜೆನ್ಸಿಯೊಂದಿಗೆ ಜುಲೈ 2010 ರಿಂದ ಮಾರ್ಚ್ 2011 ರವರೆಗೆ ಅನ್ವಯವಾಗುವಂತೆ ಒಡಂಬಡಿಕೆ ಮಾಡಿಕೊಳ್ಳುವುದು.

- "ಸಮನ್ವಯ ಶಿಕ್ಷಣ ಬೋಧಕರ ಕೈಪಿಡಿ" ಯಲ್ಲಿ ಸಮನ್ವಯ ಶಿಕ್ಷಣ ಸಂಪನ್ಮೂಲ ವ್ಯಕ್ತಿಗಳು (IERT) ನಿರ್ವಹಿಸಬೇಕಾದ ಕೆಲಸಗಳ ಬಗ್ಗೆ ಹೇಳಲಾಗಿದೆ. ಇದರಂತೆ ವಿಶೇಷ ಶಿಕ್ಷಕರು ಸಹ ಕರ್ತವ್ಯ ನಿರ್ವಹಿಸುವುದು.

**ಅವಶ್ಯಕವಿರುವ ತೀವ್ರ ನ್ಯೂನ್ಯತೆಯುಳ್ಳ ಮಕ್ಕಳಿಗೆ ಎಸ್ಕಾರ್ಟ್‌ಗಾಗಿ ಸಾರಿಗೆ ಸೌಲಭ್ಯದ ವ್ಯವಸ್ಥೆ**

ತೀವ್ರ ಸ್ವರೂಪದ ದೈಹಿಕ ನ್ಯೂನ್ಯತೆ ಇದ್ದೂ ಶಾಲೆಗೆ ಹಾಜರಾಗಲು ಸಾಧ್ಯವಿರುವ ಹಲವು ಮಕ್ಕಳು ಹಲವು ಕಾರಣಗಳಿಂದಾಗಿ ಶಾಲೆಗೆ ಗೈರು ಹಾಜರಾಗುತ್ತಿದ್ದಾರೆ. ಕೆಲವು ಪ್ರೋತ್ಸಾಹಕ ಯೋಜನೆಗಳನ್ನು ಹಾಕಿಕೊಳ್ಳುವುದರಿಂದ ಇಂತಹ ಮಕ್ಕಳನ್ನು ಸಾಮಾನ್ಯ ಶಾಲೆಗೆ ಪ್ರತಿ ದಿನವೂ ಕರೆತರಬಹುದೆಂದು ಆಶಯಿಸಿ ಸಾರಿಗೆ ವ್ಯವಸ್ಥೆಗಾಗಿ ಪ್ರತಿ ತಿಂಗಳು ಈ ಮಕ್ಕಳಿಗೆ ರೂ 200/- ರಂತೆ ಒಟ್ಟು 10 ತಿಂಗಳಿಗೆ ರೂ 2000/- ಅನುದಾನವನ್ನು ಬಿಡುಗಡೆ ಮಾಡಿದೆ. ಪ್ರತಿ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಆಯ್ದ 10 ಮಕ್ಕಳಿಗೆ ಈ ಸೌಲಭ್ಯವನ್ನು ಪ್ರಸಕ್ತ ಸಾಲಿನಲ್ಲಿ ಕಲ್ಪಿಸುವುದು.

**ಸೂಚನೆ : ಶಾಲೆಯಿಂದ ಹೊರಗುಳಿದಿರುವ ಮಕ್ಕಳ ಮಧ್ಯವರ್ತನೆಯಡಿಯಲ್ಲಿ ಸಾರಿಗೆ ಭತ್ಯೆಗಾಗಿ ಹೇಳಿರುವ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಿಗೆ ತಲಾ 1. ಕಿ.ಮೀ 3. ಕಿ.ಮೀ ದೂರ ಇರಬೇಕೆನ್ನುವ ವ್ಯಾಪ್ತಿಯ ನಿಯಮವು ಈ ಚಟುವಟಿಕೆಯ ಅನುಷ್ಠಾನಕ್ಕೆ ಅನ್ವಯಿಸುವುದಿಲ್ಲ.**

**ಜಿಲ್ಲಾ ಸಮನ್ವಯ ಶಿಕ್ಷಣ ಸಂಪನ್ಮೂಲ ವ್ಯಕ್ತಿಗಳಿಗೆ (D.S.E.R.T) ಗೌರವ ಸಂಭಾವನೆ.**

ಪ್ರತಿ ಜಿಲ್ಲೆಯ ಜಿಲ್ಲಾ ಹಂತದಲ್ಲಿ ಸಮನ್ವಯ ಶಿಕ್ಷಣ ಅನುಷ್ಠಾನದ ಉದ್ದೇಶದಿಂದ ಸಮನ್ವಯ ಶಿಕ್ಷಣ ಸಂಪನ್ಮೂಲ ವ್ಯಕ್ತಿಗಳನ್ನು ಹೊರಗುತ್ತಿಗೆ ಆಧಾರದ ಮೂಲಕ ನೇಮಿಸಿಕೊಂಡು ಸದರಿಯವರು ಕರ್ತವ್ಯ ನಿರ್ವಹಿಸುತ್ತಿರುವುದು ಸರಿಯಷ್ಟೆ. ಸದರಿಯವರಿಗೆ 2010 ಜೂನ್ ತಿಂಗಳಿನಿಂದ ಅನ್ವಯವಾಗುವಂತೆ ರೂ 10,000/- ಸಂಭಾವನೆಯನ್ನು ಮತ್ತು ರೂ 500/- ಗಳನ್ನು ನಿಗಧಿತ ಪ್ರಯಾಣ ಭತ್ಯೆಯಾಗಿ ನೀಡುವುದು. ಈ ವೆಚ್ಚವನ್ನು, ಜಿಲ್ಲಾ ಆಡಳಿತ ವೆಚ್ಚ ಶೀರ್ಷಿಕೆಯಡಿಯಲ್ಲಿ. ಅನುಮೋದನೆಯಾಗಿರುವ ಪಕ್ಷದಲ್ಲಿ ಜಿಲ್ಲಾ ಆಡಳಿತಾತ್ಮಕ ವೆಚ್ಚದಡಿಯಲ್ಲಿ ಭರಿಸುವುದು. ಇಲ್ಲದ ಪಕ್ಷದಲ್ಲಿ ಸಮನ್ವಯ ಶಿಕ್ಷಣದಡಿಯಲ್ಲಿ ವಿಶೇಷ ಶಿಕ್ಷಕರಿಗೆ ಅನುಮೋದನೆಯಾಗಿರುವ ವೇತನದಡಿಯಲ್ಲಿ ಭರಿಸಲು ತಿಳಿಸಿದೆ.

**ಕಾರ್ಯಾಗಾರ/ಸಭೆಗಳು.**

ಡಿ.ಡಿ.ಪಿ.ಐ/ಡಿ.ವೈ.ಪಿ.ಸಿ ರವರು ಪ್ರತಿ ತಿಂಗಳು ಜಿಲ್ಲಾ ಹಂತದಲ್ಲಿ ಐ.ಇ.ಆರ್.ಟಿ ಹಾಗೂ ಡಿ.ಐ.ಇ.ಅರ್.ಟಿ ಗಳನ್ನೊಳಗೊಂಡಂತೆ ಕಾರ್ಯಕ್ರಮದ ಚಟುವಟಿಕೆಗಳ ಅನುಷ್ಠಾನದ ಕುರಿತು ಪ್ರಗತಿ ಪರಿಶೀಲನಾ ಸಭೆ ನಡೆಸಿ ಪ್ರಗತಿ ವರದಿಯನ್ನು ಚಟುವಟಿಕೆವಾರು ರಾಜ್ಯ ಕಛೇರಿಗೆ ಸಲ್ಲಿಸುವುದು. ಈ ಸಭೆಗೆ ತಗಲುವ ವೆಚ್ಚವನ್ನು ಜಿಲ್ಲಾ ಆಡಳಿತಾತ್ಮಕ ಅನುದಾನದಡಿಯಲ್ಲಿ ಭರಿಸುವುದು. ಈ ವಿಷಯವಾಗಿ ಪ್ರತಿ 02 ತಿಂಗಳಿಗೆ ರಾಜ್ಯ ಕಛೇರಿಯಲ್ಲಿ ಸಮನ್ವಯ ಶಿಕ್ಷಣ ಅನುಷ್ಠಾನ ಜವಾಬ್ಧಾರರಾದ ಅಧಿಕಾರಿಗಳ ಸಭೆಯನ್ನು ನಡೆಸಲಾಗುವುದು. ಈ ಉದ್ದೇಶಕ್ಕಾಗಿ ರಾಜ್ಯ ಹಂತದಲ್ಲಿ ನಿಗದಿಪಡಿಸಿರುವ ಅನುದಾನವನ್ನು ಟಿ.ಎ/ಡಿ.ಎ ಮತ್ತು ಪ್ರಾಸಂಗಿಕ ವೆಚ್ಚಗಳಿಗೆ ಬಳಸಿಕೊಳ್ಳಲಾಗುವುದು.

**ರಾಜ್ಯ ಮಟ್ಟದ ಚಟುವಟಿಕೆಗಳು.**

ರಾಜ್ಯ ಮಟ್ಟದಲ್ಲಿ ನಿರ್ವಹಿಸಲು ಅನುಮೋದನೆಯಾಗಿರುವ ಚಟುವಟಿಕೆಗಳನ್ನು, ರಾಜ್ಯ ಕಛೇರಿಯಿಂದ ಅನುಷ್ಠಾನಗೊಳಿಸಲಾಗುವುದು.

**ಮಾಸಿಕ ಪ್ರಗತಿ ವಿವರ ಸಲ್ಲಿಸುವುದು ಹಾಗೂ ಉಸ್ತುವಾರಿ**

ಪ್ರತಿ ತಿಂಗಳು ಮುಖ್ಯ ಲೆಕ್ಕಾಧಿಕಾರಿಯವರಿಗೆ ಮಾಸಿಕ ಆರ್ಥಿಕ ಪ್ರಗತಿ ವಿವರಗಳನ್ನು ಸಲ್ಲಿಸುವಾಗ ವಿಶೇಷ ಅಗತ್ಯವುಳ್ಳ ಮಕ್ಕಳ ಚಟುವಟಿಕೆಗಳ ಶೀರ್ಷಿಕೆಯಲ್ಲಿ ಜಿಲ್ಲಾ ವೆಚ್ಚವನ್ನು ನಮೂದಿಸುತ್ತಿದ್ದು, ಈ

ಒಟ್ಟಾರೆ ಮೊತ್ತಕ್ಕೆ ಚಟುವಟಿಕೆವಾರು ವೆಚ್ಚವನ್ನು ವಿಂಗಡಿಸಿ ನೀಡಬೇಕು. ಉದಾಹರಣೆಗೆ ಜೂನ್ ತಿಂಗಳಲ್ಲಿ ಜಿಲ್ಲಾ ಸಮನ್ವಯ ಶಿಕ್ಷಣದ ಒಟ್ಟು ವೆಚ್ಚ ರೂ.3.50 ಲಕ್ಷ ಎಂದಾದರೆ ಅದರಲ್ಲಿ ಸಮನ್ವಯ ಶಿಕ್ಷಣ ಚಟುವಟಿಕೆಗಳಾದ ವೈದ್ಯಕೀಯ ತಪಾಸಣೆ/ ಸಾಧನ–ಸಲಕರಣೆ/ ತರಬೇತಿ/ ಐ.ಇ.ಆರ್.ಟಿಗಳ ವೇತನ/ ಇತ್ಯಾದಿಗಳಿಗೆ ಆದ ವೆಚ್ಚವನ್ನು ಪ್ರತ್ಯೇಕವಾಗಿ ಲಗತ್ತಿಕೆಯಲ್ಲಿ ಒದಗಿಸಿರುವ ನಿಗದಿತ ನಮೂನೆಯಲ್ಲಿ ಪ್ರತಿ ತಿಂಗಳು 5ನೇ ತಾರೀಖಿನೊಳಗೆ ನೀಡಬೇಕು. (ಭೌತಿಕ ಮತ್ತು ಆರ್ಥಿಕ ಪ್ರಗತಿ ವಿವರ). ಚಟುವಟಿಕೆಯ ಭೌತಿಕ ಪ್ರಗತಿಯು ಆರ್ಥಿಕ ಪ್ರಗತಿಗೆ ಹೊಂದಿಕೆಯಾಗಿರಬೇಕು. (ಘಟಕ ವೆಚ್ಚ ಮತ್ತು ಭೌತಿಕ ಪ್ರಗತಿ). ಇದಲ್ಲದೇ ಗುರುತಿಸಲಾಗಿರುವ "ವಿಶೇಷ ಅಗತ್ಯವುಳ್ಳ ಮಕ್ಕಳ ಮಾಹಿತಿ"ಯನ್ನು ಪ್ರತಿ ತಿಂಗಳು ಇದರೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಖಡ್ಡಾಯವಾಗಿ ನೀಡುವುದು.

ಸಮನ್ವಯ ಶಿಕ್ಷಣ ಚಟುವಟಿಕೆಗಳ ಮಾಸಿಕ ಪ್ರಗತಿಯ ವಿವರಗಳನ್ನು ಬ್ಲಾಕ್ ಮಟ್ಟದಲ್ಲಿ ಚಟುವಟಿಕೆವಾರು ಪ್ರತ್ಯೇಕ ರಿಜಿಸ್ಟರ್‌ನಲ್ಲಿ ಕಡ್ಡಾಯವಾಗಿ ದಾಖಲಿಸಬೇಕು. ಸಮನ್ವಯ ಚಟುವಟಿಕೆಗಳ ಪ್ರಗತಿಯನ್ನು (ಆರ್ಥಿಕ ಮತ್ತು ಭೌತಿಕ) Central Audit, State Audit AG, SSA External & Internal Audit ಗೆ ಒಳಪಡಿಸುವುದರಿಂದ ಈ ಎಲ್ಲಾ ಅಗತ್ಯ ವಿವರಗಳನ್ನು ಕಡ್ಡಾಯವಾಗಿ ಕ್ರಮಬದ್ಧವಾಗಿ ನಿರ್ವಹಿಸಬೇಕು. ಕಾರ್ಯಕ್ರಮದ ಪೂರ್ಣ ನಿರ್ವಹಣೆ ಆಯಾ ಡಿ.ಡಿ.ಪಿ.ಐ/ ಡಿ.ವೈ.ಪಿ.ಸಿ/ಬಿ.ಇ.ಓ/ಬಿ.ಆರ್.ಸಿ ಯವರದಾಗಿದೆ. **ಜಿಲ್ಲಾ ಮಟ್ಟದಲ್ಲಿಯೂ ಬ್ಲಾಕ್‌ವಾರು ಮತ್ತು ಚಟುವಟಿಕೆವಾರು ಮಾಸಿಕ ವೆಚ್ಚ ವಹಿಯನ್ನು ಕಡ್ಡಾಯವಾಗಿ ದಾಖಲಿಸಬೇಕು**. ರಾಜ್ಯ ಕಛೇರಿಗೆ ಸರಿಯಾದ ಸಮಯಕ್ಕೆ ನಿಗದಿತ ವರದಿಗಳನ್ನು ನೀಡದಿದ್ದಲ್ಲಿ ಹಾಗೂ ನಿಖರ ಅಂಕಿ ಅಂಶಗಳನ್ನು ಒದಗಿಸಲು ವಿಫಲವಾದಲ್ಲಿ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಯವರನ್ನು ಹೊಣೆಗಾರರನ್ನಾಗಿ ಪರಿಗಣಿಸಲಾಗುವುದು.

ಸಮನ್ವಯ ಶಿಕ್ಷಣದ ಚಟುವಟಿಕೆಗಳ ಅನುಷ್ಠಾನದಲ್ಲಿ ಬಿ.ಆರ್.ಪಿ/ಸಿ.ಆರ್.ಪಿ/ಇ.ಸಿ/ ಐ.ಇ.ಆರ್.ಟಿ ಇವರುಗಳ ಕರ್ತವ್ಯ ಮತ್ತು ಜವಾಬ್ದಾರಿಗಳೇನೆಂಬುದನ್ನು ಸ್ವತಃ ಡಿ.ಡಿ.ಪಿ.ಐ, ಬಿ.ಇ.ಒ, ಮತ್ತು ಬಿ.ಆರ್.ಸಿ.ಗಳು ಸ್ಪಷ್ಟವಾಗಿ ತಿಳಿದುಕೊಂಡು ಅದರಂತೆ ಚಟುವಟಿಕೆಗಳು ನಡೆಯುತ್ತಿರುವುದನ್ನು ಖಾತ್ರಿಪಡಿಸಿಕೊಂಡು ಸೂಕ್ತ ಮೇಲ್ವಿಚಾರಣೆಯನ್ನು ಆಯಾ ಹಂತದಲ್ಲಿ ಕೈಗೊಳ್ಳಬೇಕು.

ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಗಮನದಲ್ಲಿರಿಸಿಕೊಂಡು ಸಮನ್ವಯ ಶಿಕ್ಷಣದ ಚಟುವಟಿಕೆಗಳ ಅನುಷ್ಠಾನದಲ್ಲಿ ಸ್ಥಳೀಯ ಅಗತ್ಯತೆಗೆ ತಕ್ಕಂತೆ, ಸ್ವಂತ ಆಸಕ್ತಿ ಮತ್ತು ಪರಿಣಿತರ ಸಲಹೆ, ಮಾರ್ಗದರ್ಶನದೊಡನೆ ಕಾರ್ಯಚಟುವಟಿಕೆಗಳನ್ನು ಅರ್ಥಪೂರ್ಣವಾಗಿ ಜಾರಿಗೊಳಿಸಲು ಎಲ್ಲಾ ಹಂತದ ಅಧಿಕಾರಿ ಮತ್ತು ಸಿಬ್ಬಂದಿಗಳು ಬದ್ಧರಾಗಿರಲು ತಿಳಿಸಿದೆ. ಸಮನ್ವಯ ಶಿಕ್ಷಣದ ಈ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಅವಶ್ಯವಿದ್ದಲ್ಲಿ ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯ ಸಹ ನಿರ್ದೇಶಕರು (ಕಾರ್ಯಕ್ರಮ) ಹಿರಿಯ ಕಾರ್ಯಕ್ರಮಾಧಿಕಾರಿ (ಸಮನ್ವಯ ಶಿಕ್ಷಣ) ಮತ್ತು ಕಾರ್ಯಕ್ರಮಾಧಿಕಾರಿಗಳಿಂದ ಪಡೆಯಬಹುದು.

**ರಾಜ್ಯ ಯೋಜನಾ ನಿರ್ದೇಶಕರು**
**ಸರ್ವ ಶಿಕ್ಷಣ ಅಭಿಯಾನ**

**ಪ್ರತಿಯನ್ನು ಸೂಕ್ತ ಕ್ರಮಕ್ಕೆ.**

1. ರಾಜ್ಯದ ಎಲ್ಲಾ ಡಿ.ಡಿ.ಪಿ.ಐ ಗಳಿಗೆ ಮುಂದಿನ ಕ್ರಮಕ್ಕೆ.
2. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರಿಗೆ ಮುಂದಿನ ಕ್ರಮಕ್ಕೆ.
3. ರಾಜ್ಯದ ಎಲ್ಲಾ ಡಿ.ವೈ.ಪಿ.ಸಿ ರವರಿಗೆ ಮುಂದಿನ ಕ್ರಮಕ್ಕೆ.
4. ರಾಜ್ಯದ ಎಲ್ಲಾ ಡಿ.ಐ.ಇ.ಆರ್.ಟಿ ಗಳಿಗೆ.
5. ರಾಜ್ಯದ ಎಲ್ಲಾ ಬಿ.ಇ.ಓ ರವರಿಗೆ ಮುಂದಿನ ಸೂಕ್ತ ಕ್ರಮಕ್ಕೆ. ನಿಮ್ಮ ವ್ಯಾಪ್ತಿಯ ಎಲ್ಲಾ ಬಿ.ಆರ್.ಸಿ ಕ್ಲಸ್ಟರ್ ಪ್ರೌಢಶಾಲೆ ಮುಖ್ಯಸ್ಥರಿಗೆ, ಸಿ.ಆರ್.ಪಿ. ಗಳಿಗೆ .ಐ.ಇ.ಆರ್.ಟಿ. ವಿಶೇಷ ಶಿಕ್ಷಕರುಗಳಿಗೆ

ಹಾಗೂ ಬ್ಲಾಕ್ ನ ಎಲ್ಲಾ ಮಾರ್ಗದರ್ಶಕರಿಗೆ ಶಾಲೆಗಳಿಗೆ ಜೆರಾಕ್ಸ್ ಅಥವಾ ಸೈಕೋಸ್ಟೈಲ್ ಮಾಡಿ ವಿತರಿಸಲು ತಿಳಿಸಿದೆ.

6. ಈ ಕಛೇರಿಯ ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಮುಂದಿನ ಕ್ರಮಕ್ಕೆ.

ಇವರಿಗೆ **ಅವಗಾಹನೆ ಹಾಗೂ ಮಾಹಿತಿಗಾಗಿ ವಂದನಾ ಪೂರ್ವಕವಾಗಿ**

1. ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಬಹುಮಹಡಿ ಕಟ್ಟಡ ಡಾ॥ ಅಂಬೇಡ್ಕರ್ ರಸ್ತೆ, ಬೆಂಗಳೂರು.
2. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

**ಇವರಿಗೆ ಅವಗಾಹನೆ ಹಾಗೂ ಮಾಹಿತಿಗಾಗಿ ಸಲ್ಲಿಸಿದೆ**

1. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ, ದಾರವಾಡ.
2. ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ( ಪ್ರಾಥಮಿಕ ಶಿಕ್ಷಣ ; ಪೌಢಶಿಕ್ಷಣ ; ಡಿ.ಎಸ್.ಇ.ಆರ್.ಟಿ.. ಅಲ್ಪಸಂಖ್ಯಾತ ಭಾಷೆಗಳು; ದಾರವಾಡ ಮತ್ತು ಗುಲ್ಬರ್ಗ)
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ನ ಕಾರ್ಯ ನಿರ್ವಹಣಾಧಿಕಾರಿಯವರಿಗೆ.
4. ಸಹ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, [ ಬೆಂಗಳೂರು, ಬೆಳಗಾಂ, ಗುಲ್ಬರ್ಗ ಮತ್ತು ಮೈಸೂರು (ವಿಭಾಗೀಯ ಕಛೇರಿಗಳು) ಚಿತ್ರದುರ್ಗ, ಮೈಸೂರು, ಮಂಗಳೂರು, ಬೆಳಗಾಂ, ಜಮಖಂಡಿ ಮತ್ತು ಗುಲ್ಬರ್ಗ (ಶಿಕ್ಷಕರ ಸರ್ಕಾರಿ ಶಿಕ್ಷಣ ಕಾಲೇಜುಗಳ ಪ್ರಾಂಶುಪಾಲರು) ಶಾಲಾ ಶಿಕ್ಷಣ ಸಿ.ಪಿ.ಐ ಕಛೇರಿ ಬೆಂಗಳೂರು ; ಎಸಿಪಿಐ ಕಛೇರಿ ಗುಲ್ಬರ್ಗ; ಎಸಿಪಿಐ ಕಛೇರಿ ಧಾರವಾಡ ಮಧ್ಯಾಹ್ನ ಉಪಹಾರ ಯೋಜನೆ, ಬೆಂಗಳೂರು.]
5. ರಾಜ್ಯದ ಎಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಿಗೆ.
6. ಸಂಪಾದಕರು, ಶಿಕ್ಷಣ ವಾರ್ತೆ.